RNI: KNKAN/ 25/A5387 | ಸಂಪಾದಕರು: ರಾಜೇಶ್ವರಿ ಎನ್. ಓಲೇಕಾರ | ಸಿಇಒ: ಚಂದ್ರಶೇಖರ ಎನ್.ಕೆ. | ಸಹ ಸಂಪಾದಕರು: ಶಿವಕುಮಾರ

ಸಮಾಲೋಚನೆ ಸುದ್ದಿ

ಕನ್ನಡ ದಿನ ಪತ್ರಿಕೆ

ನೇರ ನಿಖರ ನಿರ್ದಿಷ್ಟ

ಸಂಪುಟ (Volume): 1 ಸಂಚಿಕೆ (Issue): 226 ಪುಟ (Page): 4 ದರ Rs. 2 ಶನಿವಾರ 14 ನವೆಂಬರ್ 2026 ● 14 NOVEMBER 2026 ಹಾವೇರಿ ಧಾರವಾಡ ಗದಗ ಕೊಪ್ಪಳ ವಿಜಯನಗರ ಬೆಳಗಾವಿ ಉತ್ತರ ಕನ್ನಡ samalochanersuddi@gmail.com

ಮೊ.ನಂ: 8095203132 PMG/KA/NK/HVR-59/2026-28 SAMALOCHANE RANEBENNURSUDDI Kannada Daily Morning

ಕರುನಾಡಲ್ಲಿ ನಮೋ ಮೋಡಿ

ನಮ್ಮ ಮೆಟ್ರೋದ ನಾಲ್ಕನೇ ಮಾರ್ಗ ಪಿಂಕ್ ಲೈನ್ ಉದ್ಘಾಟಿಸಿದ ಪ್ರಧಾನಿ ಮೋದಿ

ಬೆಂಗಳೂರು: ನಮ್ಮ ಮೆಟ್ರೋದ ನಾಲ್ಕನೇ ಮಾರ್ಗ ಪಿಂಕ್ ಲೈನ್ ನನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದ್ದಾರೆ. ಶುಕ್ರವಾರ ನಗರದ ಎಸ್ ಜಿ ಪಾಳ್ಯ (ಸುದ್ದಗುಂಟೆ ಪಾಳ್ಯ) ಮೆಟ್ರೋ ನಿಲ್ದಾಣದಲ್ಲಿ ಗ್ರೀನ್ ಸಿಗ್ನಲ್ ನೀಡುವ ಮೂಲಕ ಉದ್ಘಾಟಿಸಿದರು. ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು ಮೆಟ್ರೋದಲ್ಲಿ ಸಂಚಾರ ನಡೆಸಿದರು. ಈ ವೇಳೆ ರಾಜ್ಯಪಾಲರಾದ ಡಾ. ಸುಧಾ ಯಾದವ್, ಸಿಎಂ ಡಿಕೆ ಶಿವಕುಮಾರ್, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಖಾತೆ ಸಚಿವ ಕೃಷ್ಣ ಬೈರೇಗೌಡ, ಸಂಸದ ತೇಜಸ್ವಿ ಸೂರ್ಯ ಪ್ರಯಾಣ ಮಾಡಿದ್ದಾರೆ.

ಬೆಂಗಳೂರಿನ ಎಸ್‌ಜಿ ಪಾಳ್ಯ ಮೆಟ್ರೋ ನಿಲ್ದಾಣದ ಬಳಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿಆಗಮಿಸಿದ ಹಿನ್ನೆಲೆಯಲ್ಲಿ ರಸ್ತೆಯ ಎರಡು ಬದಿಗಳಲ್ಲಿ ಸ್ವಾಗತಿಸಲು ಸಾಕಷ್ಟು ಸಂಖ್ಯೆಯಲ್ಲಿ ಜನರು ನೆರೆದಿದ್ದರು. ತಮ್ಮನ್ನು ಸ್ವಾಗತಿಸಲು ಕಾದುಕುಳಿತಿದ್ದ ಸಾವಿರಾರು ಅಭಿಮಾನಿಗಳು ಮತ್ತು ಸಾರ್ವಜನಿಕರತ್ತ ಪ್ರಧಾನಿ ಮೋದಿ ನಗುಮುಖದಿಂದ ಕೈಬೀಸಿದರು. ಈ ಸಂದರ್ಭದಲ್ಲಿ ನೆರೆದಿದ್ದ ಜನರಿಂದ ಹರ್ಷೋದ್ಗಾರ ಮುಗಿಲುಮುಟ್ಟಿತ್ತು.



ಉದ್ಘಾಟನೆಯ ಬಳಿಕ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಚಿವ ಕೃಷ್ಣ ಬೈರೇಗೌಡ ಅವರು ನಿಲ್ದಾಣದಲ್ಲಿರುವ ಪಿಂಕ್ ಲೈನ್‌ನ ಮಾದರಿ ನಕ್ಷೆಯ ಮೂಲಕ ಪ್ರಧಾನಮಂತ್ರಿಯವರಿಗೆ ಮಾರ್ಗ ಮತ್ತು ಸಂಪರ್ಕ ವ್ಯವಸ್ಥೆಯ ವಿವರಗಳನ್ನು ತಿಳಿಸಿದರು.

ಮೆಟ್ರೋದಲ್ಲಿ ಸಂಚಾರ: ಉದ್ಘಾಟನೆ ಮಾಡಿದ ಬಳಿಕ ನರೇಂದ್ರ ಮೋದಿ ಅವರು ಮೆಟ್ರೋದಲ್ಲಿ ಸಂಚಾರ ಮಾಡಿದರು. ಈ ಸಂದರ್ಭದಲ್ಲಿ ಸಿಎಂ ಡಿಕೆ ಶಿವಕುಮಾರ್ ಜೊತೆಗೆ ಯೋಜನೆಗಳ ಕುರಿತಾಗಿ ಚರ್ಚೆ ನಡೆಸುತ್ತಿರುವುದು ದೃಶ್ಯಗಳಲ್ಲಿ ಕಂಡುಬಂತು. ನಿಲ್ದಾಣದಲ್ಲಿರುವ ಪಿಂಕ್ ಲೈನ್‌ನ ಮಾದರಿ ನಕ್ಷೆಯ ಮೂಲಕ ಪ್ರಧಾನಮಂತ್ರಿಯವರಿಗೆ ಮಾರ್ಗ ಮತ್ತು ಸಂಪರ್ಕ ವ್ಯವಸ್ಥೆ ಬಗ್ಗೆ ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಡಬಲ್ ಡೆಕ್ಕರ್ ಮಾದರಿಯ ಅನುಷ್ಠಾನದಿಂದ ಆಗುವ ಅನುಕೂಲಗಳು ಹಾಗೂ ಸಂಚಾರ ದಟ್ಟಣೆ ನಿವಾರಣೆ ಬಗ್ಗೆಯೂ ಸಿಎಂ ಡಿಕೆ ಶಿವಕುಮಾರ್ ಅವರು ಪ್ರಧಾನಿ ಮೋದಿ ಅವರಿಗೆ ವಿವರಿಸಿದರು.

ಬಳಿಕ ಐಐಎಂಬಿ ಅಡಿಟೋರಿಯಂನಲ್ಲಿ ನಡೆದ ಕಾರ್ಯಕ್ರಮದಲ್ಲಿ ನಾಡಪ್ರಭು ಕೆಂಪೇಗೌಡ ವಿಗ್ರಹವನ್ನು ಪ್ರಧಾನಿ ಮೋದಿ ಅವರಿಗೆ ವಿಶೇಷ ಉಡುಗೊರೆಯಾಗಿ ಸಿಎಂ ಡಿಕೆ ಶಿವಕುಮಾರ್ ನೀಡಿದರು.

ಪ್ರಧಾನಿಗೆ ಧನ್ಯವಾದ ಸಲ್ಲಿಸಿದ ತೇಜಸ್ವಿ ಸೂರ್ಯ: ಕಾರ್ಯಕ್ರಮದಲ್ಲಿ ಸ್ವಾಗತ ಭಾಷಣ ಮಾಡಿದ ಸಂಸದ ತೇಜಸ್ವಿ ಸೂರ್ಯ, "ಪ್ರಧಾನಿ ಮೋದಿ ಅವರು ಬೆಂಗಳೂರಿಗೆ ಬಂದರೆ ಅದು ನಮಗೆ ಹಬ್ಬದಂತೆ. ಬೆಂಗಳೂರಿಗೆ ಬಂದಾಗ ಇಲ್ಲಿಗೆ ಏನಾದರೂ ಕೊಡುಗೆಯನ್ನು ಪ್ರಧಾನಿ ಮೋದಿ ನೀಡುತ್ತಾ ಬಂದಿದ್ದಾರೆ. ಒಂದು ನಿಮ್ಮ ನೇತೃತ್ವದಲ್ಲಿ ನಮ್ಮ ಮೆಟ್ರೋ ಇದೀಗ 103 ಕಿ.ಮೀ ನೆಟ್ವರ್ಕ್ ತಲುಪಿದೆ" ಎಂದರು.ಮುಂದಿನ ವರ್ಷ ಏರ್ ಪೋರ್ಟ್ ಲೈನ್ ಹಾಗೂ ಬೆಂಗಳೂರು ಸಬ್ ಅರ್ಬನ್ ರೈಲು ಉದ್ಘಾಟನೆಗೆ ರಾಜ್ಯಕ್ಕೆ ಆಗಮಿಸಬೇಕು ಎಂದು ಇದೇ ಸಂದರ್ಭದಲ್ಲಿ ತೇಜಸ್ವಿ ಸೂರ್ಯ ಪ್ರಧಾನಿ ಮೋದಿ ಅವರಲ್ಲಿ ಮನವಿ ಮಾಡಿಕೊಂಡರು.

ಸಿಎಂ ಡಿಕೆ ಶಿವಕುಮಾರ್ ಅವರು ಮಾತನಾಡಿ, ಬೆಂಗಳೂರು ನಗರ ಹಲವು ಪ್ರಥಮಗಳಿಗೆ ಸಾಕ್ಷಿಯಾಗಿದೆ. ಬಂಡವಾಳ ಹೂಡಿಕೆಗೆ ಸೂಕ್ತ ನಗರವಾಗಿದೆ ಎಂದರು. ಜಿಎಸ್‌ಟಿ ಸಂಗ್ರಹದಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಈ ಕಾರಣಕ್ಕಾಗಿ ಕೇಂದ್ರ ಸರ್ಕಾರದ ಸಹಕಾರವೂ ರಾಜ್ಯ–ಕ್ಕೆ ಅಗತ್ಯವಿದೆ. ನಮ್ಮ ಮೆಟ್ರೋ ಯೋಜನೆ ಟ್ರಾಫಿಕ್ ಸಮಸ್ಯೆಗೂ ಒಂದು ಪರಿಹಾರವಾಗಿದೆ ಎಂದು ತಿಳಿಸಿದರು.

ವಿಶ್ವಕ್ಕೆ ಅತಿಹೆಚ್ಚಿನ ಸಂಖ್ಯೆಯಲ್ಲಿ ವೈದ್ಯರುಗಳನ್ನು ಹಾಗೂ ಇಂಜಿನಿಯರ್‌ಗಳನ್ನು ಕರ್ನಾಟಕ ನೀಡುತ್ತಿದೆ. ಜಿಎಸ್‌ಟಿ ಸಂಗ್ರಹದಲ್ಲೂ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ನಮ್ಮದು ಪ್ರಯತ್ನ ಅಷ್ಟೇ ಫಲ ಸಿಗುವುದರು ದೇವರಿಂದ. ಬಂಡವಾಳ ಹೂಡಿಕೆಗೆ ಕರ್ನಾಟಕ ಸೂಕ್ತವಾದ ರಾಜ್ಯವಾಗಿದೆ. ಬೆಂಗಳೂರಿನಲ್ಲಿ ಟ್ರಾಫಿಕ್ ಸಮಸ್ಯೆ ನಿವಾರಣೆಗೆ ಮೆಟ್ರೋ ಅನುಕೂಲ ಎಂದು ಸಿಎಂ ಡಿಕೆ ಶಿವಕುಮಾರ್ ತಿಳಿಸಿದರು.

ಯೋಗಕ್ಕೆ ಡಾ. ರಾಜಕುಮಾರ ಕೊಡುಗೆ ಅಪಾರ, ಮೋದಿ ಸ್ಮರಣೆ

ಬೆಂಗಳೂರು: ಡಾ ರಾಜ್ ಕುಮಾರ್ ಅವರು ಯೋಗಕ್ಕೆ ಕೊಟ್ಟ ಕೊಡುಗೆಯನ್ನು ಪ್ರಧಾನಿ ನರೇಂದ್ರ ಮೋದಿ ಸ್ಮರಿಸಿಕೊಂಡರು. ಬೆಂಗಳೂರಿನ ಜಿಗಣಿ ಬಳಿಯಿರುವ ಪ್ರಶಾಂತಿ ಕುಟೀರದ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾಗವಹಿಸಿ ಮಾತನಾಡಿದರು.

ತಮ್ಮ ಭಾಷಣದಲ್ಲಿ ಯೋಗದ ಮಹತ್ವವನ್ನು ವಿವರಿಸುವ ಸಂದರ್ಭದಲ್ಲಿ ವರನಟ ಡಾ. ರಾಜ್‌ಕುಮಾರ್ ಅವರು ಕಲೆಯೊಂದಿಗೆ ಯೋಗಕ್ಕೆ ಕೊಟ್ಟ ಸಾಧನೆ ಹಾಗೂ ಕೊಡುಗೆಯನ್ನು ವಿಶೇಷವಾಗಿ ಅವರು ಸ್ಮರಿಸಿದರು.



ಬೇರೆ ಬೇರೆ ದೇಶದ ಪ್ರಮುಖರ ಜೊತೆಗಿನ ಭೇಟಿ ಹಾಗೂ ಮಾತುಕತೆ ನಡೆಸುವ ಸಂದರ್ಭದಲ್ಲಿ ಯೋಗದ ಬಗ್ಗೆ ಚರ್ಚೆ ನಡೆಯುವುದು ಸಹಜವಾಗಿದೆ. ನನ್ನ ಜೊತೆಗೆ ಅವರು ಯೋಗದ ಕುರಿತಾಗಿ ಅನೇಕ ವಿಚಾರಗಳನ್ನು ಪ್ರಸ್ತಾಪಿಸುತ್ತಾರೆ. ನಾನು ಯೋಗದ ಕುರಿತಾಗಿ ಪರಿಣಿತ ಅಲ್ಲದೆ ಇದ್ದರು ಯೋಗವನ್ನು ಅಭ್ಯಾಸ ಮಾಡುತ್ತೇನೆ ಎಂದರು.

ವಿವಿಧ ದೇಶದ ರಾಷ್ಟ್ರಾಧ್ಯಕ್ಷರ ಕುಟುಂಬದಲ್ಲಿ ಒಬ್ಬರಾದರೂ ಯೋಗದ ಬಗ್ಗೆ ಆಸಕ್ತಿ ಹೊಂದಿದವರು ಇದ್ದಾರೆ. ಪಶ್ಚಿಮ ರಾಷ್ಟ್ರಗಳು ಮಾತ್ರವಲ್ಲ ಅರಬ್ ರಾಷ್ಟ್ರಗಳಲ್ಲೂ ಯೋಗದ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದಾರೆ ಎಂದು ವಿವರಿಸಿದರು.

ಯೋಗವು ಭಾರತೀಯ ಸಂಸ್ಕೃತಿಯನ್ನು ಹಾಗೂ ಭಾರತವನ್ನು ಅರಿತುಕೊಳ್ಳಲು ಇರುವ ಒಂದು ಮಾರ್ಗವಾಗಿದೆ. ಆಯುರ್ವೇದ ಮತ್ತು ಯೋಗದ ಲಾಭ ಪ್ರತಿಯೊಬ್ಬ ಭಾರತೀಯನಿಗೂ ದೊರಕಬೇಕು.ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿ ಎಷ್ಟೋ ವರ್ಷದ ಬಳಿಕ ಆಯುಷ್ ಸಚಿವಾಲಯವನ್ನು ಆರಂಭಿಸಲಾಯಿತು ಎಂದರು.

ಎಚ್.ವಿ. ಶೇಷಾದ್ರಿ ಸಾಧನೆ ಕೊಂಡಾಡಿದ ಮೋದಿ: ತಮ್ಮ ಭಾಷಣದಲ್ಲಿ ಎಚ್.ವಿ. ಶೇಷಾದ್ರಿ ಅವರ ಸ್ನೇಹ ಮತ್ತು ಮಾರ್ಗದರ್ಶನದ ಬಗ್ಗೆ ಸ್ಮರಿಸಿಕೊಂಡ ಪ್ರಧಾನಿ ಮೋದಿ, ಶೇಷಾದ್ರಿ ಕುರಿತಾಗಿ ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಅರ್ಥಪೂರ್ಣವಾಗಿ ಮಾತನಾಡಿದ್ದಾರೆ. ಶೇಷಾದ್ರಿಯವರು ಕೇವಲ ಸಂಘಟನಾ ಕ್ಷೇತ್ರಕ್ಕಷ್ಟೇ ಸೀಮಿತರಾಗದೆ, ಸಮಾಜ ಸೇವೆಯಲ್ಲೂ ಅತ್ಯಂತ ನಿಷ್ಠೆಯಿಂದ ತೊಡಗಿಸಿಕೊಂಡು ದೇಶಕ್ಕೆ ಮಾದರಿಯಾಗಿದ್ದರು ಎಂದು ಬಣ್ಣಿಸಿದರು. ಶೇಷಾದ್ರಿ ಅವರ ಜೀವನವನ್ನು ಪೂರ್ತಿಯಾಗಿ ದೇಶಕ್ಕೆ ಹಾಗೂ ಜನರಿಗೆ ಸಮರ್ಪನೆ ಮಾಡಿದರು. ಆರ್ ಎಸ್ ಎಸ್ ನಲ್ಲಿದ್ದು ಕೋಟ್ಯಂತರ ಸ್ವತಂ ಸೇವಕರಿಗೆ ಪ್ರೇರಣೆ ಆಗಿದ್ದವರು ಎಂದು ಕೊಂಡಾಡಿದರು.

ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿದ ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, "ಯೋಗ ಕ್ಷೇತ್ರದಲ್ಲಿ ಶೇಷಾದ್ರಿಯವರು ಜಾಗತಿಕ ಮಟ್ಟದ ಸಾಧನೆ ಮಾಡಿದ್ದಾರೆ ಎಂದು ಸ್ಮರಿಸಿದರು. ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಎಚ್.ವಿ. ಶೇಷಾದ್ರಿಯವರ ಆತ್ಮೀಯ ಸಂಬಂಧದ ಬಗ್ಗೆಯೂ ಉಲ್ಲೇಖಿಸಿದರು. ಶೇಷಾದ್ರಿ ಅವರು ಕರ್ನಾಟಕದಲ್ಲಿ ಆರ್‌ಎಸ್‌ಎಸ್ ಸಂಘಟನೆಯನ್ನು ಮುನ್ನಡೆಸಿದ್ದಲ್ಲದೆ, ದೇಶದ ವಿವಿಧ ರಾಜ್ಯಗಳಲ್ಲಿಯೂ ಸಂಘದ ವಿಸ್ತರಣೆಗಾಗಿ ಅವರು ಸೇವೆ ಸಲ್ಲಿಸಿದ್ದಾರೆ. ಅಲ್ಲದೆ, ಯೋಗ ಕ್ಷೇತ್ರದಲ್ಲಿ ವಿಶೇಷವಾಗಿ ಗುರುತಿಸಿಕೊಂಡಿದ್ದ ಶೇಷಾದ್ರಿಯವರ ಸಾಧನೆಯನ್ನು ಇಂದಿಗೂ ಜನರು ಸ್ಮರಿಸಿಕೊಳ್ಳುತ್ತಿದ್ದಾರೆ" ಎಂದರು.

ವೇದಿಕೆಯಲ್ಲೇ 22,400 ಕೋಟಿ ಬರ ಪರಿಹಾರ ಕೇಳಿದ ಡಿಕೆಶಿ

ಬೆಂಗಳೂರು: ನಮ್ಮ ಮೆಟ್ರೋ ಯೋಜನೆಗಳ ವೆಚ್ಚದಲ್ಲಿ ಕೇಂದ್ರ ಹಾಗೂ ರಾಜ್ಯಗಳ ನಡುವೆ ಸಮಾನ ಹೊಣೆಗಾರಿಕೆ ಸೇರಿದಂತೆ 22,400 ಕೋಟಿ ಬರ ಪರಿಹಾರ ಮತ್ತು ಕಬ್ಬು ಬೆಳೆಗಾರರ ಸಮಸ್ಯೆಗಳ ಬಗ್ಗೆ ವೇದಿಕೆಯಲ್ಲೇ ಪ್ರಧಾನಿ ನರೇಂದ್ರ ಮೋದಿಗೆ ಸಿಎಂ ಡಿಕೆ ಶಿವಕುಮಾರ್ ಮನವಿ ಸಲ್ಲಿಸಿದರು. ಪಿಂಕ್ ಲೈನ್ ಉದ್ಘಾಟನೆಯೊಂದಿಗೆ ನಮ್ಮ ಮೆಟ್ರೋ ಜಾಲ 100 ಕಿ.ಮೀ. ಗಡಿ ದಾಟುತ್ತಿರುವುದು ಬೆಂಗಳೂರಿನ ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಅಭಿವೃದ್ಧಿಯಲ್ಲಿ ಮಹತ್ವದ ಮೈಲಿಗಲ್ಲಾಗಿದೆ ಎಂದರು.



ಬೆಂಗಳೂರಿನ ಪಿಂಕ್ ಲೈನ್ ಮೆಟ್ರೋ ಉದ್ಘಾಟನೆ ಅಂಗವಾಗಿ ಭಾರತೀಯ ನಿರ್ವಹಣಾ ಸಂಸ್ಥೆ ಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೆಟ್ರೋ ರೈಲು ಯೋಜನೆಗಳ ಅನುಷ್ಠಾನದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಹೆಚ್ಚು ಸಮಾನವಾದ ಆರ್ಥಿಕ ಹೊಣೆಗಾರಿಕೆ ಇರಬೇಕು ಎಂದು ಮನವಿ ಮಾಡಿದರು.

ಯೋಜನೆಗಳಿಗೆ ತ್ವರಿತ ಅನುಮೋದನೆ ನೀಡುವ ಜೊತೆಗೆ ಮೂಲಸೌಕರ್ಯ ಅಭಿವೃದ್ಧಿಯ ಆರ್ಥಿಕ ಹೊರೆಯನ್ನು ಸಮಾನವಾಗಿ ಹಂಚಿಕೊಳ್ಳುವ ವ್ಯವಸ್ಥೆ ರೂಪಿಸಬೇಕು ಎಂದು ಡಿ.ಕೆ. ಶಿವಕುಮಾರ್ ಅವರು ಶುಕ್ರವಾರ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಲ್ಲಿ ಕೇಳಿಕೊಂಡರು. ಮುಂಬರುವ ವರ್ಷಗಳಲ್ಲಿ ಬೆಂಗಳೂರಿನ ಮೆಟ್ರೋ ಜಾಲವನ್ನು 500 ಕಿ.ಮೀ.ಗೆ ವಿಸ್ತರಿಸುವ ಮಹತ್ವಾಕಾಂಕ್ಷಿ ಗುರಿಯನ್ನು ಹೊಂದಿದ್ದೇವೆ ಎಂದು ಪ್ರಕಟಿಸಿದರು. ಕರ್ನಾಟಕವು ಹಲವು ಕ್ಷೇತ್ರಗಳಲ್ಲಿ ದೇಶಕ್ಕೆ ಮೊದಲ ಕೊಡುಗೆಗಳನ್ನು ನೀಡಿರುವ ಹೆಮ್ಮೆಯ ಪರಂಪರೆ ಹೊಂದಿದೆ ಎಂದ ಸಿಎಂ, ಕೈಗಾರಿಕೆ, ತಂತ್ರಜ್ಞಾನ ಮತ್ತು ವಿಜ್ಞಾನ ಕ್ಷೇತ್ರಗಳಲ್ಲಿ ರಾಜ್ಯದ ಸಾಧನೆಗಳನ್ನು ಸುದೀರ್ಘವಾಗಿ ವಿವರಿಸಿದರು. 1902ರಲ್ಲಿ ಕೋಲಾರ ಚಿನ್ನದ ಗಣಿಗಳಿಗೆ ವಿದ್ಯುತ್ ಪೂರೈಸಲು ಶಿವನಸಮುದ್ರದಲ್ಲಿ ಏಷ್ಯಾದಲ್ಲೇ ಮೊದಲ ಬಾರಿಗೆ ವಿದ್ಯುತ್ ಉತ್ಪಾದನೆ ಮಾಡಲಾಯಿತು. ಭಾರತದಲ್ಲೇ ಮೊದಲ ಬಾರಿಗೆ ವಿದ್ಯುದೀಕರಣಗೊಂಡ ನಗರ ಎಂಬ ಹೆಗ್ಗಳಿಕೆ ಬೆಂಗಳೂರಿಗೆ ಇದೆ ಎಂದು ತಿಳಿಸಿದರು. ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ಮೂಲಕ ದೇಶದ ಮೊದಲ ವಿಮಾನ ತಯಾರಿಕಾ ಘಟಕ ಕರ್ನಾಟಕದಲ್ಲಿ ಸ್ಥಾಪನೆಯಾಯಿತು ಎಂದು ಇದೇ ವೇಳೆ ಸ್ಮರಿಸಿದರು.

ದೇಶದಲ್ಲೇ ಮೊದಲ ಬಾರಿಗೆ ಕೈಗಾರಿಕಾ ನೀತಿಯನ್ನು ರೂಪಿಸಿದ ರಾಜ್ಯ ಕರ್ನಾಟಕ. ಇದೇ ರೀತಿ ಪ್ರತ್ಯೇಕ ಸ್ಟಾರ್ಟ್‌ಅಪ್ ನೀತಿಯನ್ನು ಜಾರಿಗೆ ತಂದ ಮೊದಲ ರಾಜ್ಯವೂ ಕರ್ನಾಟಕವಾಗಿದೆ. ಟೆಕ್ಸಾಸ್ ಇನ್‌ಸ್ಟ್ರುಮೆಂಟ್ಸ್‌ನ ಭಾರತದ ಮೊದಲ ಜಾಗತಿಕ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ ಬೆಂಗಳೂರಿನಲ್ಲಿ ಆರಂಭವಾಯಿತು. ಭಾರತದ ಮೊದಲ ಐಫೋನ್ ಜೋಡಣೆ ಘಟಕವೂ ಬೆಂಗಳೂರಿನಲ್ಲಿ ಸ್ಥಾಪನೆಯಾಯಿತು ಎಂದು ಅವರು ಹೇಳಿದರು.

ತಂತ್ರಜ್ಞಾನ ಕ್ಷೇತ್ರದಲ್ಲಿನ ರಾಜ್ಯದ ಬೆಳವಣಿಗೆಯನ್ನು ಉಲ್ಲೇಖಿಸಿದ ಮುಖ್ಯಮಂತ್ರಿ, ವಿಶ್ವದಲ್ಲೇ ಎರಡನೇ ಅತಿ ದೊಡ್ಡ ಕೃತಕ ಬುದ್ಧಿಮತ್ತೆ (ಂಖ) ಮತ್ತು ಯಂತ್ರ ಕಲಿಕೆ (ಒಐ) ಪ್ರತಿಭಾ ಸಂಪನ್ಮೂಲ ಹೊಂದಿರುವ ನಗರವಾಗಿ ಬೆಂಗಳೂರು ಗುರುತಿಸಿಕೊಂಡಿದೆ. ಬೀಜಿಂಗ್ ನಂತರ ಏಷ್ಯಾದ ಎರಡನೇ ಅತಿ ದೊಡ್ಡ ಂಖ ಆಧಾರಿತ ತಂತ್ರಜ್ಞಾನ ಸಮೂಹವೂ ಬೆಂಗಳೂರಿನಲ್ಲಿದೆ. ದೇಶದ ಅತಿದೊಡ್ಡ ಚಿಪ್ ವಿನ್ಯಾಸ ಕೇಂದ್ರವೂ ಬೆಂಗಳೂರಿನಲ್ಲಿದೆ ಎಂದು ತಿಳಿಸಿದರು. ರಾಜ್ಯದಾದ್ಯಂತ ಪ್ರತಿವರ್ಷ 1.5 ಲಕ್ಷಕ್ಕೂ ಹೆಚ್ಚು ಎಂಜಿನಿಯರ್‌ಗಳು ಪದವಿ ಪಡೆಯುತ್ತಿದ್ದಾರೆ. ಕರ್ನಾಟಕದ ಕೈಗಾರಿಕಾ ಉದ್ಯೋಗ ಕ್ಷೇತ್ರದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಶೇ.37ರಷ್ಟಿದ್ದು, ಇದು ರಾಷ್ಟ್ರೀಯ ಸರಾಸರಿ ಶೇ.18ಕ್ಕಿಂತ ಗಣನೀಯವಾಗಿ ಹೆಚ್ಚಾಗಿದೆ ಎಂದರು.

ಒಟ್ಟಾರೆ ರಫ್ತು ಮತ್ತು ಪ್ರತಿಭಾ ಸಂಪನ್ಮೂಲದ ನಿಲ್ವಳ ಹರಿವಿನಲ್ಲಿ ಕರ್ನಾಟಕ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ಕಳೆದ ಐದು ವರ್ಷಗಳ ಒಟ್ಟು ಜಿಎಸ್‌ಟಿ ಸಂಗ್ರಹ ಮತ್ತು ವಿದೇಶಿ ನೇರ ಹೂಡಿಕೆ (FDI)ಯಲ್ಲಿ ರಾಜ್ಯ ಎರಡನೇ ಸ್ಥಾನದಲ್ಲಿದೆ ಎಂದು ಹೇಳಿದರು.

ಮೆಟ್ರೋ ಯೋಜನೆಗಳ ಹಣಕಾಸು ಹಂಚಿಕೆಯಲ್ಲಿ ಸುಧಾರಣೆಗೆ ಆಗ್ರಹ: ಬೆಂಗಳೂರಿನ ಮೂಲಸೌಕರ್ಯ ಅಭಿವೃದ್ಧಿಯ ಕುರಿತು ಮಾತನಾಡಿದ ಶಿವಕುಮಾರ್, ನಗರದ ಸಂಚಾರ ದಟ್ಟಣೆ ಸಮಸ್ಯೆ ಪರಿಹರಿಸಲು ರೂಪಿಸಿರುವ ಸಮಗ್ರ ಕಾರ್ಯತಂತ್ರದಲ್ಲಿ ಮೆಟ್ರೋ ಸಂಪರ್ಕ ಅತ್ಯಂತ ಪ್ರಮುಖ ಭಾಗವಾಗಿದೆ ಎಂದರು.

ಆದರೆ, ಮೆಟ್ರೋ ಯೋಜನೆಗಳು ಸಾಮಾನ್ಯವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಶೇ.50:50ರ ಪಾಲುದಾರಿಕೆಯ ಆಧಾರದ ಮೇಲೆ ಆರಂಭವಾಗುತ್ತವೆ. ವಾಸ್ತವದಲ್ಲಿ ರಾಜ್ಯ ಸರ್ಕಾರಗಳ ಮೇಲಿನ ಆರ್ಥಿಕ ಹೊರೆ ಇದಕ್ಕಿಂತ ಹೆಚ್ಚಾಗಿರುತ್ತದೆ ಎಂದು ಅವರು ಗಮನ ಸೆಳೆದರು.

ಬೆಂಗಳೂರು ಮೆಟ್ರೋ ಯೋಜನೆಯಲ್ಲಿ ಭೂಸ್ವಾಧೀನ ವೆಚ್ಚ, ಉಪಯುಕ್ತ ಸೇವೆಗಳ ಸ್ಥಳಾಂತರ, ಕೇಂದ್ರ ತೆರಿಗೆಗಳ ಶೇ.50ರಷ್ಟು ಪಾಲು, ರಾಜ್ಯ ತೆರಿಗೆಗಳ ಶೇ.100ರಷ್ಟು ಹೊರೆ, ಸಂಪೂರ್ಣ ವಿದೇಶಿ ಸಾಲದ ಮರುಪಾವತಿ ಹಾಗೂ ಬಹುತೇಕ ವೆಚ್ಚ ಹೆಚ್ಚಳದ ಹೊಣೆಯನ್ನು ಕರ್ನಾಟಕವೇ ಭರಿಸುತ್ತಿದೆ ಎಂದು ವಿವರಿಸಿದರು.

ಪ್ರಶಾಂತಿ ಕುಟೀರದ ವಿಶೇಷತೆ ಏನು?

ಬೆಂಗಳೂರಿನ ಆನೇಕಲ್ ತಾಲ್ಲೂಕಿನ ಜಿಗಣಿ ಸಮೀಪವಿರುವ ಪ್ರಶಾಂತಿ ಕುಟೀರ ಎಸ್–ವ್ಯಾಸ ಯೋಗ ವಿಶ್ವವಿದ್ಯಾಲಯದ ಪ್ರಮುಖ ಕ್ಯಾಂಪಸ್ ಆಗಿದೆ. ಈ ಸಂಸ್ಥೆ ಸಮಗ್ರ ಶಿಕ್ಷಣ, ಯೋಗ ಮತ್ತು ಸಂಶೋಧನೆಗೆ ಪ್ರಸಿದ್ಧವಾಗಿದೆ. ಕಳೆದ ಐದು ದಶಕಗಳಿಂದ ಯೋಗ, ಆಧ್ಯಾತ್ಮ, ವೈಜ್ಞಾನಿಕ ಸಂಶೋಧನೆ ಹಾಗೂ ಆರೋಗ್ಯ ಕ್ಷೇತ್ರಕ್ಕೆ ಮಹತ್ವದ ಕೊಡುಗೆಯನ್ನು ಕೊಡುತ್ತಾ ಬಂದಿದೆ. ಪ್ರಶಾಂತಿ ಕುಟೀರಕ್ಕೆ ಇದೀಗ 50ರ ಸಂಭ್ರಮ. ಈ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಾರೆ.



ಬೆಂಗಳೂರಿಗೆ ಆಗಮಿ

ಸಮಾಲೋಚನೆ ಸುದ್ದಿ
ಕನ್ನಡ ದಿನ ಪತ್ರಿಕೆ
SAMALOCHANE RANEBENNURSUDDI
Kannada Daily Morning

ಕಾನೂನುಬದ್ಧ ದತ್ತು ಸ್ವೀಕಾರಕ್ಕೆ ಮುಂದಾಗಿ; ಅಡ್ಡದಾರಿ ಹಿಡಿದರೆ ಶಿಕ್ಷೆ ತಪ್ಪಿದ್ದಲ್ಲ: ಪಿಎಸ್‌ಐ ಭಾರತಿ ಕುರಿ

ಸಮಾಲೋಚನೆ ಸುದ್ದಿ ಬ್ಯಾಡಗಿ

ಕಾನೂನುಬಾಹಿರವಾಗಿ ಮಕ್ಕಳನ್ನು ದತ್ತು ಪಡೆಯುವುದು ಶಿಕ್ಷಾರ್ಹ ಅಪರಾಧವಾಗಿದ್ದು, ಮಕ್ಕಳಿಲ್ಲದ ಪೋಷಕರು ಯಾವುದೇ ಅಡ್ಡದಾರಿ ಹಿಡಿಯದೆ ಸರಕಾರದ ನಿಯಮಾನುಸಾರ ಕಾನೂನುಬದ್ಧ ದತ್ತು ಪ್ರಕ್ರಿಯೆ ಮೂಲಕವೇ ಮಗುವನ್ನು ಸ್ವೀಕರಿಸಬೇಕು ಎಂದು ಬ್ಯಾಡಗಿ ಪೊಲೀಸ್ ಠಾಣೆಯ ಪಿಎಸ್‌ಐ ಭಾರತಿ ಕುರಿ ಹೇಳಿದರು.

ಪಟ್ಟಣದ ಬ್ಯಾಡಗಿ ಪೊಲೀಸ್ ಠಾಣೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ವತಿಯಿಂದ ರಾಷ್ಟ್ರೀಯ ದತ್ತು ಮಾಸಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಕಾನೂನುಬದ್ಧ ದತ್ತು ಪ್ರಕ್ರಿಯೆ ಕುರಿತು ಅರಿವು ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮಕ್ಕಳಿಲ್ಲದ ದಂಪತಿಗಳು ಮಗುವನ್ನು ದತ್ತು ಪಡೆಯುವ ಆಸೆಯಿಂದ ಕೆಲವೊಮ್ಮೆ ಮಧ್ಯವರ್ತಿಗಳ ಆಮಿಷಕ್ಕೆ ಒಳಗಾಗಿ ಕಾನೂನುಬಾಹಿರ ಮಾರ್ಗ ಅನುಸರಿಸುವ ಸಾಧ್ಯತೆಗಳಿವೆ. ಇಂತಹ ಕೃತ್ಯಗಳಿಂದ ದತ್ತು ಪಡೆಯುವ ಪೋಷಕರು ಮಾತ್ರವಲ್ಲದೆ ಮಗುವಿನ ಭವಿಷ್ಯವೂ ಸಂಕಷ್ಟಕ್ಕೆ ಸಿಲುಕಬಹುದು. ಆದ್ದರಿಂದ ಯಾವುದೇ ವ್ಯಕ್ತಿ ಅಥವಾ ಮಧ್ಯವರ್ತಿಗಳ ಮೂಲಕ ಹಣದ ವ್ಯವ ಹಾರ ನಡೆಸಿ ಮಗುವನ್ನು ಪಡೆಯುವ ಪ್ರಯತ್ನ ಮಾಡಬಾರದು. ದತ್ತು ಪ್ರಕ್ರಿಯೆಯಲ್ಲಿ ಸರಕಾರ ರೂಪಿಸಿರುವ ಕಾನೂನು ಮತ್ತು ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ತಿಳಿಸಿದರು.

ಮಕ್ಕಳ ಮಾಟಾಟ ಜಾಲ ಕಂಡಲ್ಲಿ ತಿಳಿಸಿ:ಮಕ್ಕಳ ಮಾರಾಟ, ಖರೀದಿ ಹಾಗೂ ಅಕ್ರಮವಾಗಿ ಮಕ್ಕಳ ಹಸ್ತಾಂತರ ಮಾಡುವಂತಹ ಪ್ರಕರಣಗಳು ಕಂಡುಬಂದಲ್ಲಿ ಸಾರ್ವಜನಿಕರು ಮೌನವಾಗಿರದೆ ಸಂಬಂಧಪಟ್ಟ ಇಲಾಖೆಯ ಗಮನಕ್ಕೆ ತರಬೇಕು. ಮಕ್ಕಳ ಹಕ್ಕುಗಳ ರಕ್ಷಣೆ ಪ್ರತಿಯೊಬ್ಬ ನಾಗರಿಕನ ಸಾಮಾಜಿಕ ಜವಾಬ್ದಾರಿಯಾಗಿದೆ ಎಂದು ಹೇಳಿದರು. ಕಾನೂನು ಪಾಲಿಸಿ:ಜಿಲ್ಲಾ ಮಕ್ಕಳ ಘಟಕದ ಅಧಿಕಾರಿ ಮಂಗಳಾ ಜಿ. ಮಾತನಾಡಿ ಮಕ್ಕಳ ದತ್ತು ಎನ್ನುವುದು ಕೇವಲ ಮಗುವನ್ನು ಪಡೆದುಕೊಳ್ಳುವ ಪ್ರಕ್ರಿಯೆಯಲ್ಲ. ಅದೊಂದು ಮಗುವಿಗೆ ಸುರಕ್ಷಿತ ಬದುಕು, ಪ್ರೀತಿ, ವಾತ್ಸಲ್ಯ ಹಾಗೂ ಉತ್ತಮ ಭವಿಷ್ಯ ಕಲ್ಪಿಸುವ ಮಹತ್ವದ ಜವಾಬ್ದಾರಿಯಾಗಿದೆ. ಪ್ರತಿಯೊಂದು ಮಗುವಿಗೂ ಕುಟುಂಬದ ಪ್ರೀತಿ ಮತ್ತು ರಕ್ಷಣೆಯಲ್ಲಿ ಬೆಳೆಯುವ ಹಕ್ಕಿದೆ. ಹೀಗಾಗಿ ದತ್ತು ಪಡೆಯಲು ಇಚ್ಛಿಸುವವರು ಅಧಿಕೃತ ಸಂಸ್ಥೆಗಳ ಮೂಲಕವೇ ಅರ್ಜಿ ಸಲ್ಲಿಸಿ, ನಿಗದಿತ ಪರಿಶೀಲನೆ ಹಾಗೂ ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಿ ಮಗುವನ್ನು ದತ್ತು ಪಡೆಯಬೇಕು ಎಂದರು. ಕಾರ್ಯಕ್ರಮದಲ್ಲಿ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ಹಾಗೂ ಸ್ಥಳೀಯ ಪೊಲೀಸ್ ಸಿಬ್ಬಂದಿ, ಜೆ.ಸಿ.ಬ್ಯಾಡಗಿ ಲೋಕೇಶ ಲಮಾಣಿ. ಸಿ.ಜಿ.ಸೋಮನಕಟ್ಟಿ, ಸಂತೋಷ ಬಂಗಿ, ಆರ್.ವಿ.ವಡ್ಡರ, ಚೇತನಾಎಚ್. ಎಸ್,ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಖಾಸಗಿ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಎಷ್ಟು ಉದ್ಯೋಗ? ಹತ್ತು ವರ್ಷಗಳ ನೇಮಕಾತಿ ಲೆಕ್ಕ ಕೇಳಿದ ಕರವೇ!

ಸಮಾಲೋಚನೆ ಸುದ್ದಿ ರಾಣೇಬೆನ್ನೂರು



ತಾಲೂಕಿನ ಖಾಸಗಿ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಎಷ್ಟರಮಟ್ಟಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ ಎಂಬುದರ ಕುರಿತು ಸಂಪೂರ್ಣ ಮಾಹಿತಿ ನೀಡುವಂತೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆಯ ತಾಲೂಕು ಘಟಕವು ಐದು ಪ್ರಮುಖ ಕೈಗಾರಿಕೆಗಳ ಮುಖ್ಯಸ್ಥರಿಗೆ ಮನವಿ ಸಲ್ಲಿಸಿದೆ.

ಕರ್ನಾಟಕದನೆಲ,ಜಲ,ವಿದ್ಯುತ್‌ಹಾಗೂಮೂಲಸೌಕರ್ಯಗಳನ್ನು ಬಳಸಿಕೊಂಡು ಕಾರ್ಯನಿರ್ವಹಿಸುತ್ತಿರುವ ಖಾಸಗಿ ಕಂಪನಿಗಳು ಸ್ಥಳೀಯ ಕನ್ನಡಿಗರಿಗೆ ನ್ಯಾಯಯುತ ಉದ್ಯೋಗಾವಕಾಶ ಕಲ್ಪಿಸಬೇಕು. ನೇಮಕಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕು ಎಂಬ ಉದ್ದೇಶದಿಂದ ಕರವೇ ರಾಜ್ಯವ್ಯಾಪಿ ಅಭಿಯಾನ ಹಮ್ಮಿಕೊಂಡಿದೆ.

ಈ ಹಿನ್ನೆಲೆಯಲ್ಲಿ ರಾಣೇಬೆನ್ನೂರು ತಾಲೂಕಿನ ಆದಿತ್ಯ ಬಿರ್ಲಾ ಹರಿಹರ ಫಾಲಿಫೈಬರ್ಸ್, ಕವಲೆತ್ತಿನ ಸಿಂಥೈಟ್ ಪ್ರೈವೇಟ್ ಲಿಮಿಟೆಡ್,ಕರೂರಿನ ರಾಮ್ಕೋ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್, ಹನುಮನಹಳ್ಳಿಯ ಗ್ರೀನರ್ಜಿ ಬಯೋ ರಿಫೈನರೀಸ್ ಪ್ರೈವೇಟ್ ಲಿಮಿಟೆಡ್ ಹಾಗೂ ತರೇದಹಳ್ಳಿಯ ವೆಂಕಟೇಶ್ವರ ಹ್ಯಾಚರೀಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಗಳಿಗೆ ಮನವಿ ಸಲ್ಲಿಸಲಾಗಿದೆ.

ಕಳೆದ 10 ವರ್ಷಗಳಲ್ಲಿ ಕಂಪನಿಗಳಲ್ಲಿ ನೇಮಕಗೊಂಡ ಒಟ್ಟು ಕಾರ್ಮಿಕರು ಮತ್ತು ಸಿಬ್ಬಂದಿ ಸಂಖ್ಯೆ, ಅವರಲ್ಲಿ ಕನ್ನಡಿಗರು ಹಾಗೂ ಹೊರರಾಜ್ಯದವರ ಪ್ರಮಾಣ, ಸ್ಥಳೀಯರಿಗೆ ನೀಡಿರುವ ಉದ್ಯೋಗಾವಕಾಶ, ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವವರ ವಿವರ ಹಾಗೂ ನೇಮಕಾತಿಯ ಮಾನದಂಡಗಳ ಕುರಿತು ಮಾಹಿತಿ ಕೇಳಲಾಗಿದೆ.

ಇದರ ಜೊತೆಗೆ ಸುತ್ತಮುತ್ತಲಿನ ಗ್ರಾಮಗಳಿಗೆ ಕಂಪನಿಗಳು ಕಲ್ಪಿಸಿರುವ ಸೌಲಭ್ಯಗಳು, ವಾಯುಮಾಲಿನ್ಯ ನಿಯಂತ್ರಣಕ್ಕೆ ಕೈಗೊಂಡ ಕ್ರಮಗಳು ಹಾಗೂ ತುಂಗಭದ್ರಾ ನದಿಗೆ ಹರಿಯುತ್ತಿರುವ ಕಲುಷಿತ ನೀರಿನ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳ ಬಗ್ಗೆಯೂ ವಿವರ ನೀಡುವಂತೆ ಒತ್ತಾಯಿಸಲಾಗಿದೆ.

ಒಂದು ವಾರದೊಳಗೆ ಮನವಿಗೆ ಸ್ಪಂದಿಸಿ ಸಂಪೂರ್ಣ ಮಾಹಿತಿ ನೀಡಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ರಾಜ್ಯಮಟ್ಟದ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಕರವೇ ತಾಲೂಕು ಘಟಕ ಎಚ್ಚರಿಕೆ ನೀಡಿದೆ. ಈ ಸಂದರ್ಭದಲ್ಲಿ ಕರವೇ ತಾಲೂಕು ಅಧ್ಯಕ್ಷ ಕೊಟ್ರೇಶ ಶಿವಪುತ್ರಪ್ಪ ಗುತ್ತೂರ ಸೇರಿದಂತೆ ಸಂಘಟನೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಹುಬ್ಬಳ್ಳಿಯಲ್ಲಿ ಚಿಕಿತ್ಸೆ ಫಲಿಸದೆ ಅಪರಿಚಿತ ವ್ಯಕ್ತಿ ಸಾವು

ಹಾವೇರಿ: ಹುಬ್ಬಳ್ಳಿ ರೈಲ್ವೆ ನಿಲ್ದಾಣದ ಹೊರಗಡೆಯ ಹಳೆಯ ಪಾರ್ಸಲ್ ಕಚೇರಿ ರಸ್ತೆ ಹತ್ತಿರ ಪೀಟ್ಸ್ ಬಂದಿದ್ದ 40–45 ವರ್ಷದ ವ್ಯಕ್ತಿಯನ್ನು ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಗೆ ನ.9 ರಂದು ದಾಖಲಿಸಲಾಗಿತ್ತು, ಚಿಕಿತ್ಸೆ ಫಲಿಸದೇ ಆ ವ್ಯಕ್ತಿ ಮೃತಪಟ್ಟಿದ್ದು, ಮೃತರ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿರುವುದಿಲ್ಲ. ಪ್ರಕರಣ ದಾಖಲಿಸಿಕೊಂಡು ತನಿಖೆಕೈಗೊಳ್ಳಲಾಗಿದೆ.

ಮೃತ ವ್ಯಕ್ತಿ ವಾರಸುದಾರರು ಇದ್ದರೆ ಹುಬ್ಬಳ್ಳಿ ರೈಲ್ವೆ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ 0836–2384751 ಅಥವಾ ಮೊ.9480802126 ಸಂಪರ್ಕಿಸಬಹುದೆಂದು ಹುಬ್ಬಳ್ಳಿ ರೈಲ್ವೆ ಪೊಲೀಸ್ ಠಾಣೆ ಪೊಲೀಸ್ ಉಪ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅಹೋರಾತ್ರಿ ಧರಣಿ

ಸಮಾಲೋಚನೆ ಸುದ್ದಿ ರಾಣೇಬೆನ್ನೂರು.

ಕೋಳಿ ಸಾಕಾಣಿಕೆ ವೆಚ್ಚ ನಿರಂತರವಾಗಿ ಹೆಚ್ಚಾಗುತ್ತಿದ್ದರೂ, ಸಾಕಾಣಿಕೆದಾರರಿಗೆ ನೀಡಲಾಗುತ್ತಿರುವ ದರದಲ್ಲಿ ಯಾವುದೇ ಸಮರ್ಪಕ ಹೆಚ್ಚಳವಾಗದ ಹಿನ್ನೆಲೆಯಲ್ಲಿ, ದರ ಪರಿಷ್ಕರಣೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನ.16ರಂದು ತಾಲೂಕಿನ ತರೇದಹಳ್ಳಿ ಗ್ರಾಮದ ಶ್ರೀ ವೆಂಕಟೇಶ್ವರ ಹ್ಯಾಚರೀಸ್ ಕಂಪನಿಎದುರುಅಹೋರಾತ್ರಿಧರಣಿನಡೆಸಲುನಿರ್ಧರಿಸಲಾಗಿದೆ ಎಂದು ಹಾವೇರಿ ಜಿಲ್ಲಾ ಕೋಳಿ ಸಾಕಾಣಿಕೆದಾರರ ಸಂಘದ ಜಿಲ್ಲಾಧ್ಯಕ್ಷ ಹನುಮಂತಪ್ಪ ಓಲೇಕಾರ ಹೇಳಿದರು.

ನಗರದ ಪತ್ರಿಕಾ ಕಾರ್ಯಾಲಯದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2021ರಲ್ಲಿ ಕಂಪನಿಯು ಪ್ರತಿ ಕೆ.ಜಿ. ಕೋಳಿ ಖರೀದಿ ದರವನ್ನು ವರ್ಷಕ್ಕೆ 50 ಪೈಸೆಯಂತೆ ಹೆಚ್ಚಿಸುವ ಭರವಸೆ ನೀಡಿತ್ತು. ಆದರೆ ಈವರೆಗೂ ಪ್ರತಿ ಕೆ.ಜಿ.ಗೆ ಕೇವಲ 6.50 ರೂ. ದರ ನೀಡಲಾಗುತ್ತಿದೆ. ಕಳೆದ ಐದು ವರ್ಷಗಳಲ್ಲಿ ಕೋಳಿ ಸಾಕಾಣಿಕೆಗೆ ಅಗತ್ಯವಿರುವ ಕಟ್ಟಿಗೆ, ಕೊಳಲಿ, ವಿದ್ಯುತ್, ಸುಣ್ಣ, ಫಿನಾಯಿಲ್ ಸೇರಿದಂತೆ ಇತರೆ ಸಾಮಗ್ರಿಗಳ ಬೆಲೆ ದುಪ್ಪಟ್ಟಾಗಿದೆ. ಇದರಿಂದ ಸಾಕಾಣಿಕೆದಾರರು ಆರ್ಥಿಕ ಸಂಕಷ್ಟ ಎದುರಿಸುವಂತಾಗಿದೆ ಎಂದರು. ಇದರೊಂದಿಗೆ ಕಂಪನಿಯಿಂದ ಪೂರೈಕೆಯಾಗುವ ಕೋಳಿ ಮರಿಗಳ ಆರೋಗ್ಯ ಮತ್ತು ಬೆಳವಣಿಗೆಯಲ್ಲಿಯೂ ಸಮಸ್ಯೆಗಳಿದ್ದು, ನಿರೀಕ್ಷಿತ ತೂಕ ಹಾಗೂ ಇಳುವರಿ ದೊರೆಯುತ್ತಿಲ್ಲ. ಮತ್ತೊಂದೆಡೆ ಇತರೆ ಕಂಪನಿಗಳು ಮಾರುಕಟ್ಟೆಯ ಪರಿಸ್ಥಿತಿಗೆ ಅನುಗುಣವಾಗಿ ಉತ್ತಮ ದರ ನೀಡುತ್ತಿದ್ದರೂ, ಶ್ರೀ ವೆಂಕಟೇಶ್ವರ ಹ್ಯಾಚರೀಸ್ ಮಾತ್ರ ಹಳೆಯ ದರವನ್ನೇ ಮುಂದುವರಿಸಿರುವುದು ಸಾಕಾಣಿಕೆದಾರರ ಅಸಮಾಧಾನಕ್ಕೆ ಕಾರಣವಾಗಿದೆ ಎಂದರು.

ತಾಲೂಕಿನಲ್ಲಿ ಸುಮಾರು 2 ಸಾವಿರ ಕುಟುಂಬಗಳು ಕೋಳಿ ಸಾಕಾಣಿಕೆಯನ್ನೇ ಜೀವನಾಧಾರವನ್ನಾಗಿ ಮಾಡಿಕೊಂಡಿವೆ. ಉತ್ಪಾದನಾ ವೆಚ್ಚಕ್ಕೆ ತಕ್ಕಂತೆ ಖರೀದಿ ದರ ನಿಗದಿಪಡಿಸಿ, ಕೋಳಿ ಸಾಕಾಣಿಕೆದಾರರ ಸಮಸ್ಯೆಗಳಿಗೆ ಕಂಪನಿ ಆಡಳಿತ ಮಂಡಳಿ ಸ್ಪಂದಿಸಬೇಕು. ಈ ಹಿನ್ನೆಲೆಯಲ್ಲಿ ನ.16ರಂದು ಬೆಳಗ್ಗೆ 11 ಗಂಟೆಯಿಂದ ಬೇಡಿಕೆ ಈಡೇರುವವರೆಗೂ ಕಂಪನಿ ಎದುರು ಅಹೋರಾತ್ರಿ ಧರಣಿ ನಡೆಸಲಾಗುವುದು ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಶಂಕರಗೌಡ ಗ್ಯಾನಗೌಡ್ರ, ಬಸವನಗೌಡ ಗಂಗನಗೌಡ್ರ, ನಾಗರಾಜ ಏಕಬೋಟಿ ಹಾಗೂ ಮಂಜಪ್ಪ ಗುಗ್ಗರಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಹೊರರಾಜ್ಯದಿಂದ ಭತ್ತದ ಆವಕ ತಡೆಯಲು ರೈತರ ಆಗ್ರಹ: ಎಪಿಎಂಸಿ ಅಧಿಕಾರಿಗಳಿಗೆ ಮನವಿ

ಹರಿಹರ : ಹೊರರಾಜ್ಯಗಳಿಂದ ಸ್ಥಳೀಯ ಎಪಿಎಂಸಿ ಮಾರುಕಟ್ಟೆಗೆ ಭತ್ತ ಆವಕವಾಗುತ್ತಿರುವುದರಿಂದ ಸ್ಥಳೀಯ ರೈತರಿಗೆ ನಷ್ಟ ಉಂಟಾಗುತ್ತಿದೆ. ಇದನ್ನು ತಕ್ಷಣ ತಡೆಗಟ್ಟಬೇಕೆಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲ್ಲೂಕು ಸಮಿತಿ ಪದಾಧಿಕಾರಿಗಳು ಗುರುವಾರ ಎಪಿಎಂಸಿ ಕಾರ್ಯದರ್ಶಿ ಶಿಲ್ಪಾಶ್ರೀ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ರೈತ ಸಂಘದ ತಾಲ್ಲೂಕು ಸಮಿತಿ ಗೌರವಾಧ್ಯಕ್ಷ ಜಿ. ಪ್ರಭುಗೌಡ ಕೆ.ಎನ್.ಹಳ್ಳಿ ಮಾತನಾಡಿ, ಜಲಾಶಯದಲ್ಲಿ ಸಮರ್ಪಕ ನೀರಿನ ಲಭ್ಯತೆ ಇಲ್ಲದೆ, ಮಳೆಯೂ ಕೈಕೊಟ್ಟಿರುವುದರಿಂದ ಈ ಬಾರಿ ಭತ್ತದ ಬೆಳೆ ಕುಂಠಿತವಾಗಿದೆ. ಇಂತಹ ಸಂಕಷ್ಟದ ಪರಿಸ್ಥಿತಿಯಲ್ಲಿ ಕೆಲ ವ್ಯಾಪಾರಸ್ಥರು ಹೊರರಾಜ್ಯಗಳಿಂದ ಕಡಿಮೆ ಬೆಲೆಯ ಭತ್ತವನ್ನು ಅಕ್ರಮವಾಗಿ ಸ್ಥಳೀಯ ಮಾರುಕಟ್ಟೆಗೆ ಸಾಗಿಸುತ್ತಿದ್ದಾರೆ ಎಂದು ಆರೋಪಿಸಿದರು.

ಇದರಿಂದ ಅಲ್ಪಸ್ವಲ್ಪ ಭತ್ತ ಬೆಳೆದಿರುವ ಸ್ಥಳೀಯ ರೈತರಿಗೆ ತಮ್ಮ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಬೆಲೆ ದೊರೆಯದಂತಾಗಿದೆ. ಈಗಾಗಲೇ ಮಳೆ ಕೊರತೆಯಿಂದ ಸಂಕಷ್ಟದಲ್ಲಿರುವ ರೈತರಿಗೆ ಹೊರರಾಜ್ಯದ ಭತ್ತದ ಆವಕ ಗಾಯದ ಮೇಲೆ ಬರೆ ಎಳೆದಂತಾಗಿದೆ. ಆದ್ದರಿಂದ ಎಪಿಎಂಸಿ ಚೆಕ್‌ಪೋಸ್ಟ್‌ಗಳಲ್ಲಿ ಕಡ್ಡಾಯವಾಗಿ ತಪಾಸಣೆ ನಡೆಸಬೇಕು. ಅಕ್ರಮವಾಗಿ ಭತ್ತ ಸಾಗಣೆ ಮಾಡುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ರೈತ ಸಂಘದ ತಾಲ್ಲೂಕು ಸಮಿತಿ ಗೌರವಾಧ್ಯಕ್ಷ ಗರಡಿಮನೆ ಬಸಣ್ಣ ಮಾತನಾಡಿ, ಸ್ಥಳೀಯ ಮಾರುಕಟ್ಟೆಗೆ ಹೊರರಾಜ್ಯದ ಭತ್ತದ ಆವಕ ಮುಂದುವರಿದರೆ ಎಪಿಎಂಸಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ಮನವಿ ಸ್ವೀಕರಿಸಿದ ಎಪಿಎಂಸಿ ಕಾರ್ಯದರ್ಶಿ ಶಿಲ್ಪಾಶ್ರೀ ಮಾತನಾಡಿ, ತಾಲ್ಲೂಕಿನಲ್ಲಿರುವ ಮೂರು ಚೆಕ್‌ಪೋಸ್ಟ್‌ಗಳಲ್ಲಿ ನಿರಂತರವಾಗಿ ತಪಾಸಣೆ ನಡೆಸಲಾಗುತ್ತಿದೆ. ನಿಯಮಬಾಹಿರವಾಗಿ ಭತ್ತ ಸಾಗಣೆ ಮಾಡುತ್ತಿರುವುದು ಕಂಡುಬಂದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಈಸಂದರ್ಭದಲ್ಲಿರೈತಸಂಘದತಾಲ್ಲೂಕುಸಮಿತಿ ಅಧ್ಯಕ್ಷ ಕೊಕ್ಕನೂರು ಅಂಜಿನಪ್ಪ, ಕಾರ್ಯದರ್ಶಿ ಡಿ.ಬಿ.ಮಂಜುನಾಥ ಹಾಲಿವಾಣ, ಕಾರ್ಯಾಧ್ಯಕ್ಷ ಎಸ್. ಆನಂದರಾವ್ ಪಾಮೇನಹಳ್ಳಿ, ಉಪಾಧ್ಯಕ್ಷ ಗಡಿಗಿ ಆನಂದಪ್ಪ, ಸಂಚಾಲಕ ಮಂಜುನಾಥ ಹಾಲಿವಾಣ, ಕೃಷ್ಣೋಜಿರಾವ್ ಪಾಮೇನಹಳ್ಳಿ, ಮಹೇಶ್ ದೊಗ್ಗಳ್ಳಿ, ನಾಗರಾಜ್ ಕರಡಿ ಸಾರಥಿ, ಬಿ. ಸುರೇಶ್, ಎಸ್. ರೇವಣಸಿದ್ದಪ್ಪ, ಟಿ. ಬಸಪ್ಪ ಜಿ.ಟಿ. ಕಟ್ಟೆ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಕಾನೂನು ಅರಿವು–ನೆರವು ಸುರಕ್ಷತಾ ಅಭಿಯಾನದಲ್ಲಿ ಜಿಲ್ಲೆಗೆ ಹರಿಹರ ಪ್ರಥಮ

ಹರಿಹರ : ಕಾನೂನು ಅರಿವು–ನೆರವು ಸುರಕ್ಷತಾ ಅಭಿಯಾನದಲ್ಲಿ ಜಿಲ್ಲೆಯಲ್ಲಿಯೇ ಹರಿಹರ ತಾಲೂಕು ಪ್ರಥಮ ಸ್ಥಾನ ಗಳಿಸಿದೆ ಎಂದು ನ್ಯಾಯಾಧೀಶ ಬೀರಪ್ಪ ಕಾಂಬಳೆ ತಿಳಿಸಿದರು.

ನಗರದ ನ್ಯಾಯಾಲಯದ ಆವರಣದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ, ತಾಲೂಕು ವಕೀಲರ ಸಂಘ ಹಾಗೂ ವಿವಿಧ ಸರ್ಕಾರಿ ಇಲಾಖೆಗಳ ಸಹಯೋಗದಲ್ಲಿ ರಾಷ್ಟ್ರೀಯ ಕಾನೂನು ಸೇವಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಕಾನೂನು ಅರಿವು–ನೆರವು ಕಾರ್ಯಕ್ರಮದಲ್ಲಿ ಹಿರಿಯ ನ್ಯಾಯವಾದಿ ಬಿ. ಹಾಲಪ್ಪ ಅವರನ್ನು ಸನ್ಮಾನಿಸಿ ಅವರು ಮಾತನಾಡಿದರು.

ವಕೀಲ ವೃತ್ತಿ ಅತ್ಯಂತ ಪವಿತ್ರವಾದುದು. ವೈಯಕ್ತಿಕ ಜೀವನಕ್ಕಿಂತ ಜನಸೇವೆಗೆ ಹೆಚ್ಚಿನ ಆದ್ಯತೆ ನೀಡುವ ವೃತ್ತಿ ಇದಾಗಿದೆ. ಸಮಾಜದ ಎಲ್ಲ ವರ್ಗದ ಜನರಲ್ಲಿ ಕಾನೂನಿನ ಅರಿವು ಮೂಡಿಸುವುದರ ಜತೆಗೆ, ಅನ್ಯಾಯಕ್ಕೊಳಗಾದವರಿಗೆ ನ್ಯಾಯ ದೊರಕಿಸಿಕೊಟ್ಟು ಅವರ ವಿಶ್ವಾಸ ಗಳಿಸುವುದರಲ್ಲಿ ವಕೀಲರಿಗೆ ಅಪಾರ ತೃಪ್ತಿ ಇದೆ. ನ್ಯಾಯಾಧೀಶರು ತೀರ್ಪು ನೀಡುವ ಸ್ಥಾನದಲ್ಲಿದ್ದಾಗ ಮಾತ್ರ ಆ ಜವಾಬ್ದಾರಿಯಲ್ಲಿರುತ್ತಾರೆ. ಆ ಸ್ಥಾನದಿಂದ ಕೆಳಗಿಳಿದಾಗ ಅವರೂ ಎಲ್ಲರಂತೆ ಸಾಮಾನ್ಯ ವಕೀಲರೇ ಆಗಿರುತ್ತಾರೆ ಎಂದರು.

ವಕೀಲರ ಸಂಘದ ಅಧ್ಯಕ್ಷ ಗಣೇಶ ಕೆ. ದುರ್ಗದ ಮಾತನಾಡಿ, ಕುಂಬಳೂರು ಗ್ರಾಮದವರಾದ ಹಿರಿಯ ನ್ಯಾಯವಾದಿ ಬಿ. ಹಾಲಪ್ಪ ಅವರು 1973ರಲ್ಲಿ ಮೈಸೂರಿನ ಜೆಎಸ್‌ಎಸ್ ಕಾಲೇಜಿನಲ್ಲಿ ಪದವಿ ಪೂರ್ಣಗೊಳಿಸಿ, ದಾವಣಗೆರೆಯ ಆರ್.ಎಲ್. ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪಡೆದಿದ್ದಾರೆ. ಹಿರಿಯ ವಕೀಲ ಅಮರಾವತಿ ಗಂಗಪ್ಪ ಅವರ ಬಳಿ ಕಿರಿಯ ವಕೀಲರಾಗಿ ವೃತ್ತಿ ಜೀವನ ಆರಂಭಿಸಿ, ಕುಂಬಳೂರಿನಿಂದ ಪ್ರತಿನಿತ್ಯ ನ್ಯಾಯಾಲಯಕ್ಕೆ ಆಗಮಿಸಿ ಜನರಿಗೆ ಕಾನೂನು ಸೇವೆ

SAMALOCHANE RANEBENNURSUDDI
Kannada Daily Morning

ಸಮಾಲೋಚನೆ ಸುದ್ದಿ
ಕನ್ನಡ ದಿನ ಪತ್ರಿಕೆ

ಶನಿವಾರ 14 ನವೆಂಬರ್ 2026
14 NOVEMBER 2026

ಸರ್ಕಾರಿ ಶಾಲೆಗಳನ್ನು ಖಾಸಗಿ ಶಿಕ್ಷಣ ಮಾಫಿಯಾಗಳಿಗೆ ಒಪ್ಪಿಸುವ ಹುನ್ನಾರಕ್ಕೆ ಆಮ್ ಆದ್ಮಿ ವಿರೋಧ



ಹರಿಹರ:ಸರ್ಕಾರಿ ಶಾಲೆಗಳನ್ನು ಖಾಸಗಿ ಶಿಕ್ಷಣ ಮಾಫಿಯಾಗಳಿಗೆ ಒಪ್ಪಿಸುವ ಹುನ್ನಾರಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮುಂದಾಗಿರುವುದು ಖಂಡನೀಯ. ಇಂತಹ ಕಾರ್ಯಕ್ಕೆ ಆಮ್ ಆದ್ಮಿ ಪಕ್ಷ ಯಾವುದೇ ಕಾರಣ–ಕ್ಕೂ ಅವಕಾಶ ನೀಡುವುದಿಲ್ಲ ಎಂದು ಪಕ್ಷದ ತಾಲೂಕು ಅಧ್ಯಕ್ಷ ಜಿ.ಹೆಚ್. ಬಸವರಾಜ್ ಹಲಸಬಾಳು ಎಚ್ಚರಿಕೆ ನೀಡಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬಹಿರಂಗವಾಗಿ ನೀಡಿರುವ ಹೇಳಿಕೆಯು ರಾಜ್ಯದ ಶಿಕ್ಷಣ ವ್ಯವಸ್ಥೆಯ ಬಗ್ಗೆ ಕಾಂಗ್ರೆಸ್ ಸರ್ಕಾರಕ್ಕಿರುವ ನೈಜ ಕಾಳಜಿಯನ್ನು ಬಯಲುಪಡಿಸಿದೆ ಎಂದು ಟೀಕಿಸಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧಾನದ ಆಶಯದಂತೆ ಜನರಿಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಅದರಲ್ಲೂ ಶಿಕ್ಷಣ ಮತ್ತು ಆರೋಗ್ಯ ಸೇವೆಗಳನ್ನು ಉಚಿತವಾಗಿ ಅಥವಾ ಕೈಗೆಟುಕುವ ದರದಲ್ಲಿ ಒದಗಿಸಬೇಕು. ಇಂತಹಸೌಲಭ್ಯಗಳನ್ನುಪಡೆಯುವುದು ಪ್ರತಿಯೊಬ್ಬ ಭಾರತೀಯ ಪ್ರಜೆಯ ಹಕ್ಕಾಗಿದೆ ಎಂದು ತಿಳಿಸಿದ್ದಾರೆ.

ಆದರೆ, ರಾಜ್ಯ ಕಾಂಗ್ರೆಸ್ ಸರ್ಕಾರದ ರಿಯಲ್ ಎಸ್ಟೇಟ್ ನೀತಿಯಿಂದಾಗಿ ಸರ್ಕಾರಿ ಶಿಕ್ಷಣ ವ್ಯವಸ್ಥೆಯೂ ಖಾಸಗಿ ಶಿಕ್ಷಣ ಮಾಫಿಯಾಗಳ ಹಿಡಿತಕ್ಕೆ ಸಿಲುಕುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಸರ್ಕಾರಿ ಶಾಲೆಗಳನ್ನು ಖಾಸಗಿಯವರಿಗೆ ವಹಿಸುವ ಯಾವುದೇ ಪ್ರಯತ್ನವನ್ನು ಆಮ್ ಆದ್ಮಿ ಪಕ್ಷ ಸಹಿಸುವುದಿಲ್ಲ. ಸರ್ಕಾರದ ಇಂತಹ ನೀತಿಯ ವಿರುದ್ಧ ಪಕ್ಷದ ವತಿಯಿಂದ ಬೃಹತ್ ಹೋರಾಟ ನಡೆಸಲಾಗುವುದು ಎಂದು ಜಿ.ಹೆಚ್. ಬಸವರಾಜ್ ಎಚ್ಚರಿಕೆ ನೀಡಿದ್ದಾರೆ.

ಗುಪ್ತಾ ಸಂಯುಕ್ತ ಪದವಿ ಪೂರ್ವ ಕಾಲೇಜ್ ಪ್ರಾಚಾರ್ಯರಿಗೆ ಪಿಎಚ್‌ಡಿ ಪದವಿ



ರಾಣೇಬೆನ್ನೂರು: ನಗರದ ಬಿ.ಕೆ. ಗುಪ್ತಾ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯದ ಪ್ರಾಚಾರ್ಯರಾದ ಕುಮಾರ್ ಡಿ.ಕೆ. ಅವರು, " ಎ ಸ್ಟಡಿ ಆನ್ ಭಾರತ ರತ್ನ ಪಂಡಿತ್ ಮದನ್ ಮೋಹನ್ ಮಾಳವಿಯ್ ಎಜುಕೇಶನಲ್ ಐಡಿಯಾಲಜಿ ಅಂಡ್ ರೇವಿಲೆನ್ಸಗ ಟು ಮಾಡರ್ನ್ ಎಜುಕೇಶನ್ ಸಿಸ್ಟಮ್ (A Study on Bharat Ratna Pandit Madan Mohan Malaviya's Educational Ideology and Its Relevance to Modern Education System") ಎಂಬ ವಿಷಯದ ಕುರಿತು ಸಂಶೋಧನೆ ಪೂರ್ಣಗೊಳಿಸಿದ್ದಕ್ಕಾಗಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. (ಡಾಕ್ಟರೇಟ್) ಪದವಿ ಪಡೆದಿದ್ದಾರೆ.

ಅವರ ಈ ಶೈಕ್ಷಣಿಕ ಹಾಗೂ ಸಂಶೋಧನಾ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿ,ರಾ.ಶಿ. ಸಂಸ್ಥೆಯ ಅಧ್ಯಕ್ಷರಾದ ಶ್ರೀನಿವಾಸ್ ಸಾವಕಾರ ಅವರು ಅಭಿನಂದಿಸಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಉಪಪ್ರಾಚಾರ್ಯರು, ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಎಲ್ಲಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದು, ಕುಮಾರ್ ಡಿ.ಕೆ. ಅವರಿಗೆ ಅಭಿನಂದನೆ ಸಲ್ಲಿಸಿ ಅವರ ಮುಂದಿನ ಶೈಕ್ಷಣಿಕ ಮತ್ತು ಸಂಶೋಧನಾ ಜೀವನಕ್ಕೆ ಶುಭ ಹಾರೈಸಿದರು.

ಯೋಜನೆ ಬಗ್ಗೆ ಎಲ್ಲರೂ ತಿಳಿದುಕೊಳ್ಳಬೇಕು: ನ್ಯಾಯಾಧೀಶ ಬಿರಾದಾರ ದೇವೀಂದ್ರಪ್ಪ ಎನ್.

ಹಾವೇರಿ:ನ.13(ಕರ್ನಾಟಕ ವಾರ್ತೆ): ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರವು ಜಾರಿ ಮಾಡಿರುವ ಪ್ರತಿಯೊಂದು ಯೋಜನೆ ಬಗ್ಗೆ ಸಾರ್ವಜನಿಕರು ತಿಳಿದುಕೊಳ್ಳಬೇಕು. ಅಂದಾಗ ಮಾತ್ರ ರಾಷ್ಟ್ರ, ರಾಜ್ಯ, ಜಿಲ್ಲಾ ಹಾಗೂ ತಾಲೂಕು ಮಟ್ಟದ ಪ್ರಾಧಿಕಾರ ಹಾಗೂ ಕಾನೂನು ಸೇವಾ ಸಮಿತಿಗಳ ಕಾರ್ಯವೈಖರಿಗಳ ಬಗ್ಗೆ ಎಲ್ಲರಿಗೂ ಅರ್ಥವಾಗುತ್ತದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಜಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಬಿರಾದಾರ ದೇವಿಂದ್ರಪ್ಪ ಎನ್, ಅವರು ಹೇಳಿದರು.

ಹಾವೇರಿ ನಗರದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಭಾಭವನದಲ್ಲಿ ಶುಕ್ರವಾರ ಜಿಲ್ಲಾ ನ್ಯಾಯಾಂಗ, ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯವಾದಿಗಳ ಸಂಘ, ಪೊಲೀಸ್ ಇಲಾಖೆ, ಆಭಿಯೋಜನೆ ಇಲಾಖೆ, ಶಾಲಾ ಶಿಕ್ಷಣ ಇಲಾಖೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಸಹಯೋಗದಲ್ಲಿ ಜರುಗಿದ ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಾನೂನು ನೆರವು ಹಾಗೂ ಕಾನೂನು ಅರಿವು ನೀಡುವುದು ಕಾನೂನು ಸೇವೆಗಳ ಪ್ರಾಧಿಕಾರ ಕಾರ್ಯವಾಗಿದೆ. ಆರ್ಥಿಕವಾಗಿ ಹಿಂದುಳಿದ ಜನರು, ಹಿರಿಯ ನಾಗರಿಕರು, ಮಹಿಳೆಯರು, ತೃತೀಯ ಲಿಂಗಿಗಳು, ಅಂಗವಿಕಲರು, ಪರಿಶಿಷ್ಟ ಕಾತಿ, ಪರಿಶಿಷ್ಟ ಪಂಗಡದವರು ಉಚಿತವಾಗಿ ಕಾನೂನು ಸೇವೆ , ನೆರವು ಪಡೆಯಬಹುದು ಎಂದರು.

ಸಮಾಜದಲ್ಲಿನ ಎಲ್ಲಾ ಶಾಲ–ಕಾಲೇಜುಗಳಲ್ಲಿ ಪಂಚಾಯತಿ ಮಟ್ಟದಲ್ಲಿವಾರ್ಡ್‌ಗಳಮಟ್ಟದಲ್ಲಿಇತರಇಲಾಖೆಗಳಸಹಯೋಗದೊಂದಿಗೆ ಕಾನೂನು ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ವಿದ್ಯಾರ್ಥಿಗಳನ್ನುಹಾಗೂ ಎಲ್ಲವರ್ಗದ ಜನರನ್ನು ಕಾನೂನು ಸಾಕ್ಷರರನ್ನಾಗಿ ಮಾಡುತ್ತಿದೆ. ಕಾನೂನು ಸೇವೆಗಳ ಪ್ರಾಧಿಕಾರದ ಎಲ್ಲಾ ಯೋಜನೆಗಳನ್ನು ತಿಳಿದುಕೊಂಡು ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪೆನಲ್ ವಕೀಲರಾದ ಜಿ.ಕೆ.ಕಮ್ಮಾರ ಅವರು ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ಕಾಯ್ದೆ ಬಗ್ಗೆ ಹಾಗೂ ಎನ್‌ಎಎಲ್‌ಎಸ್‌ಎ ಯೋಜನೆಗಳ ಕುರಿತು ಉಪನ್ಯಾಸ ನೀಡಿದರು. ಉಪ ವಿಭಾಗಾಧಿಕಾರಿ ಕಲ್ಯಾಣಿ ಕಾಂಬ್ಳೆ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಯಶೋಧಾ ವಂಟಗೋಡಿ, ನ್ಯಾಯಾಧೀಶರಾದ ಎಂ.ಜಿ.ಶಿವಳ್ಳಿ,ಶ್ರೀಮತಿಅಶ್ವಿನಿವಿಜಯಶಿರಿಯಣ್ಣನವರ, ಎನ್.ಎಂ.ರಮೇಶ, ಶ್ರೀಮತಿ ಶ್ರೀಶೈಲಜಾ ಎಚ್., ಮಹ ್ಮದ್ ಅನ್ವರ ಹುಸೇನ ಮೊಗಲಾನಿ, ಶ್ರೀಮತಿ ಶೋಭಾ ಬಿ.ಜಿ, ಆಕರ್ಷ ಎಂ., ರಾಹುಲ್ ಆದಿನಾಥ್, ಜಿಲ್ಲಾ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಎಚ್.ಸಿದ್ದನಗೌಡ್ರ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ನಾಗರಾಜ ಇತರರು ಉಪಸ್ಥಿತರಿದ್ದರು.



ನ.14 ರಂದು ಯುವ ಸೌರಭ ಕಾರ್ಯಕ್ರಮ

ಹಾವೇರಿ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸ್ವಾಮಿ ವಿವೇಕಾನಂದ ಪದವಿ ಪೂರ್ವ ಕಾಲೇಜು ಸಹಯೋಗದಲ್ಲಿ ಯುವ ಸೌರಭ ಕಾರ್ಯಕ್ರಮ ನವೆಂಬರ್ 14 ರಂದು ಬೆಳಿಗ್ಗೆ 10–30 ಗಂಟೆಗೆ ಹಾವೇರಿ ನಗರದ ಪ್ರವಾಸಿತಾಣ ಗಾಂಧಿ ಭವನದಲ್ಲಿ ಜರುಗಲಿದೆ. ಕೇಂದ್ರ ಗ್ರಾಹಕರ ವ್ಯವಹಾರಗಳ, ಆಹಾರ ಮತ್ತು ಸಾರ್ವಜನಿಕ ವಿತರಣಾ ಹಾಗೂ ಹೊಸ ಮತ್ತು ನವೀಕರಿಸಬಹುದಾದ ಇಂಧನ ಹಾಗೂ ಶಿಕ್ಷಣ ಸಚಿವರಾದ ಪ್ರಹ್ಲಾದ ಜೋಶಿ, ವಿಧಾನ ಪರಿಷತ್ ಸಭಾಪತಿ ಸಲೀಂ ಅಹ್ಮದ್ ಅವರ ಘನ ಉಪಸ್ಥಿತಿಯಲ್ಲಿ, ಸಕ್ಕರೆ ಮತ್ತು ಜವಳಿ ಸಚಿವರು ಹಾಗೂ ಹಾವೇರಿ ಜಿಲ್ಲಾ ಉಸ್ತುವಾರಿ ಸಚಿವರಾದ ರುದ್ರಪ್ಪ ಮಾನಪ್ಪ ಲಮಾಣಿ ಅವರು ಉದ್ಘಾಟನೆ ನೆರವೇರಿಸಿ ಅಧ್ಯಕ್ಷತೆ ವಹಿಸಿಲಿದ್ದಾರೆ. ಮಾಜಿ ಮುಖ್ಯಮಂತ್ರಿಗಳು ಹಾಗೂ ಲೋಕಸಭಾ ಸದಸ್ಯರಾದ ಬಸವರಾಜ ಎಸ್.ಬೊಮ್ಮಾಯಿ ಅವರು ಗೌರವ ಉಪಸ್ಥಿತರಿರುವರು.

ಮುಖ್ಯ ಅತಿಥಿಗಳಾಗಿ ಬ್ಯಾಡಗಿ ಶಾಸಕರು ಹಾಗೂ ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವರಾಜ ಶಿವಣ್ಣನವರ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಅಧ್ಯಕ್ಷ ಸೈಯದ್ ಅಜೀಮ್ ಪೀರ್ ಎಸ್ ಖಾದ್ರಿ, ಶಾಸಕರು ಹಾಗೂ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷ ಶ್ರೀನಿವಾಸ ಮಾನೆ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಎಸ್.ಆರ್.ಪಾಟೀಲ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಸೋಮಣ್ಣ ಬೇವಿನಮರದ, ಶಾಸಕರಾದ ಯು.ಬಿ.ಬಣಕಾರ, ಪ್ರಕಾಶ ಕೋಳಿವಾಡ, ಶಾಸಕರು ಹಾಗೂ ಬೆಳಗಾವಿ ಮತ್ತು ಕಲಬುರಗಿ ವಿಭಾಗದ ಅಲ್ಪಸಂಖ್ಯಾತರ ವಸತಿ ನಿಲಯಗಳ ಆಹಾರ ಪರಿಶೀಲನ ಸಮಿತಿ ಅಧ್ಯಕ್ಷರಾದ ಯಾಸೀರ ಅಹ್ಮದ್‌ಖಾನ್ ಪಠಾಣ, ವಿಧಾನ ಪರಿಷತ್ ಶಾಸಕರಾದ ಬಸವರಾಜ ಹೊರಟ್ಟಿ, ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹನುಮಂತಪ್ಪ ಮರಗಡಿ, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪ್ರಭುಗೌಡ ಬಿಷ್ಟನಗೌಡ್ರು ಹಾಗೂ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಂ.ಎಂ. ಮೈದೂರ ಪಾಲ್ಗೊಳ್ಳಲಿದ್ದಾರೆ.



ಜಯಂತಿ ಆಚರಣೆ ಪೂರ್ವಭಾವಿ ಸಭೆ

ಹಾವೇರಿ: ಕನಕದಾಸರ ಜಯಂತಿ ಆಚರಣೆ ಪೂರ್ವಭಾವಿ ಸಭೆ ನ.16 ರಂದು ಮಧ್ಯಾಹ್ನ 3–30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಕೋರ್ಟ್ ಹಾಲ್‌ನಲ್ಲಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗಲಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಹಾನಗಲ್–ಸ್ಥಿರಾಸ್ತಿಗಳ ಮಾರುಕಟ್ಟೆ ದರ ಪರಿಷ್ಕರಣೆ

ಹಾವೇರಿ: ಹಾನಗಲ್ ತಾಲೂಕು ವ್ಯಾಪ್ತಿಯ ಸ್ಥಿರಾಸ್ತಿಗಳ ಮಾರುಕಟ್ಟೆ ದರಗಳನ್ನು 2026–27ನೇ ಸಾಲಿಗೆ ದಿ.6–11–2026 ರಂದು ತಾಲೂಕು ಮೌಲ್ಯಮಾಪನ ಉಪ ಸಮಿತಿ ಸಭೆಯಲ್ಲಿ ಪರಿಷ್ಕರಿಸಲಾಗಿದೆ. ಈ ಪರಿಷ್ಕರಿಸಿದ ಸ್ಥಿರಾಸ್ತಿ ಮಾರುಕಟ್ಟೆ ದರಗಳ ಕರಡು ಪ್ರತಿಯನ್ನು ಸಾರ್ವಜನಿಕ ಸಲಹೆ ಸೂಚನೆ ಆಕ್ಷೇಪಣೆಗಳಿಗಾಗಿ ಕಚೇರಿಯ ಸೂಚನಾ ಫಲಕದಲ್ಲಿ ದಿನಾಂಕ 09–11–2026 ರಂದು ಪ್ರಕಟಿಸಲಾಗಿದೆ. ಈ ಕುರಿತು ಸಲಹೆ, ಸೂಚನೆ ಮತ್ತು ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಸಾರ್ವಜನಿಕರು ಸೂಕ್ತ ದಾಖಲೆಗಳೊಂದಿಗೆ ದಿನಾಂಕ 28–11–2026ರೊಳಗಾಗಿ ಉಪ ನೋಂದಣಿ ಅಧಿಕಾರಿಗಳ ಕಚೇರಿ, ಹಾನಗಲ್ ಇವರಿಗೆ ಲಿಖಿತ ರೂಪದಲ್ಲಿ ಸಲ್ಲಿಸಬೇಕು ಎಂದು ಹಾನಗಲ್ ತಾಲೂಕು ಮೌಲ್ಯಮಾಪನ ಉಪ ಸಮಿತಿ ಸದಸ್ಯ ಕಾರ್ಯದರ್ಶಿಗಳು ಹಾಗೂ ಉಪ ನೋಂದಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

93 ಅರ್ಹ ರೈತ ಮಹಿಳೆಯರಿಂದ ಅರ್ಜಿ

ಗದಗ : ಗದಗ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ತಾಂಡಾಗಳಲ್ಲಿ ಇರುವ ಅರ್ಹ ಮಹಿಳಾ ಫಲಾನುಭವಿಗಳಿಗೆ ತಾಂಡಾ ಅಭಿವೃದ್ಧಿ ನಿಗಮದ ಯೋಜನೆಯಡಿ ಕರ್ನಾಟಕ ಸಹಕಾರ ಕುಕ್ಕುಟ ಮಹಾ ಮಂಡಳ ನಿಯಮಿತ ಇವರ ಮುಖಾಂತರ ಐದು ವಾರದ ದೇಶಿ ಕೋಳಿ ಮರಿಗಳನ್ನು ಉಚಿತವಾಗಿ ವಿತರಿಸುವ ಯೋಜನೆಯಡಿ ಐದು ವಾರದ ದೇಶಿ ಕೋಳಿ ಮರಿಗಳನ್ನು ವಿತರಿಸಲಾಗುವುದು. ಪ್ರತಿ ಫಲಾನುಭವಿಗೆ 20 ಕೋಳಿ ಮರಿಗಳನ್ನು ವಿತರಿಸಲಾಗುವುದು. ಗದಗ ತಾಲೂಕಿನ ಗ್ರಾಮೀಣ ವಿಭಾಗದ ಅರ್ಹ ರೈತ ಮಹಿಳೆಯರಿಂದ (ಬಂಜಾರ, ಲಂಭಾಣಿ, ಲಮಾಣಿ, ಸುಕಾಲಿ, ಸುಗಾಲಿ ಜನಾಂಗದವರಿಗೆ ಮಾತ್ರ) ಅರ್ಜಿ ಕರೆಯಲಾಗಿದೆ. ಅರ್ಹ ರೈತ ಮಹಿಳೆಯರು ಇದರ ಸದುಪಯೋಗ ಪಡೆದುಕೊಳ್ಳಬಹುದಾಗಿದೆ. ಅರ್ಜಿ ಸಲ್ಲಿಸಲು ನವೆಂಬರ್ 25 ಕೊನೆಯ ದಿನವಾಗಿದ್ದು ಅರ್ಜಿ ಹಾಗೂ ಹೆಚ್ಚಿನ ಮಾಹಿತಿಗಾಗಿ ತಾಲೂಕಿನ ಮುಖ್ಯ ಪಶು ವೈದ್ಯಾಧಿಕಾರಿಗಳು (ಆಡಳಿತ) ಪಶು ಆಸ್ಪತ್ರೆ, ಗದಗ ಈ ಕಚೇರಿ ಸಂಪರ್ಕಿಸಬಹುದಾಗಿದೆ.

ಮನುಷ್ಯನ ಬದುಕಿಗೆ ಬೆಳಕನ್ನು ಕೊಡುವುದೇ ನಿಜವಾದ ಧರ್ಮ: ಶ್ರೀ ರಂಭಾಪುರಿ ಜಗದ್ಗುರುಗಳು ಆಶೀರ್ವಚನ

ಚನ್ನಗಿರಿ: ಧರ್ಮವೆಂದರೆ ವಿಭಜಿಸುವುದಲ್ಲ. ಎಲ್ಲರನ್ನೂ ಒಗ್ಗೂಡಿಸುವುದು ಧರ್ಮ. ಧರ್ಮವೆಂದರೆ ದ್ವೇಷಿಸುವುದಲ್ಲ. ಪ್ರೀತಿಯಿಂದ ಕೂಡಿ ಬದುಕುವುದು. ಧರ್ಮವೆಂದರೆ ಕೇವಲ ಆಚರಣೆಯಲ್ಲ. ಆಚಾರದಲ್ಲಿ ಸತ್ಯವನ್ನು ಅಳವಡಿಸಿಕೊಳ್ಳುವುದು. ಧರ್ಮವೆಂಬುದು ಕೇವಲ ಪೂಜಿಸುವ ಪದ್ಧತಿಯಲ್ಲ. ಅದು ಮನುಷ್ಯನ ಬದುಕಿಗೆ ಬೆಳಕನ್ನು ನೀಡುವ ದಿವ್ಯ ಜ್ಯೋತಿ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಗುರುವಾರ ತಾಲೂಕಿನ ಬಸವಾಪುರ ಗ್ರಾಮದಲ್ಲಿ ಜರುಗಿದ ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ಧರ್ಮ ಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಸಮಾಜದಲ್ಲಿ ಪರಸ್ಪರ ಸಹಕಾರದ ಮನೋಭಾವ ಬೆಳೆಸುವುದು ಧರ್ಮದ ಮಹತ್ಕಾರ್ಯವಾಗಿದೆ. ಬೆಳೆಯುವ ಯುವ ಜನಾಂಗದಲ್ಲಿ ಸಂಸ್ಕಾರ ಹಿರಿಯರಲ್ಲಿ ಸದ್ಭಾವನೆ ಮಕ್ಕಳಲ್ಲಿ ಸನ್ಮಾರ್ಗದ ಪ್ರಜ್ಞೆ ಬೆಳೆಸುವುದೇ ನಿಜವಾದ ಧರ್ಮ. ಮುಂದಿನ ಪೀಳಿಗೆಗೆ ಕೇವಲ ಆಸ್ತಿ ಅಂತಸ್ತು ಮತ್ತು ಐಶ್ವರ್ಯಗಳನ್ನು ಬಿಟ್ಟು ಹೋಗುವುದಕ್ಕಿಂತ ಧರ್ಮ ಸಂಸ್ಕೃತಿ ಸಂಸ್ಕಾರ ಮತ್ತು ಮಾನವೀಯತೆಯ ಪರಂಪರೆಯನ್ನು ಬಿಟ್ಟು ಹೋಗುವುದು ಬಹು ದೊಡ್ಡ ಕೊಡುಗೆಯಾಗಿದೆ. ಧರ್ಮವೆಂದರೆ ಹಣ ಸಂಪಾದಿಸುವುದಲ್ಲ. ಪರರ ಕಣ್ಣೀರನ್ನು ಒರೆಸುವುದು. ಇಂದು ಮನುಷ್ಯನಿಗೆ ಹಣ ಅಧಿಕಾರವಿದೆ. ವಿಜ್ಞಾನ ತಂತ್ರಜ್ಞಾನವಿದೆ. ಆದರೆ ಮನಸ್ಸಿನಲ್ಲಿ ನೆಮ್ಮದಿ, ಕುಟುಂಬದಲ್ಲಿ ಪ್ರೀತಿ ಸಮಾಜದಲ್ಲಿ ವಿಶ್ವಾಸ ಬದುಕಿನಲ್ಲಿ ಮಾನವೀಯತೆಯ ಕೊರತೆಯಿದೆ. ಇವುಗಳನ್ನು ಉಳಿಸುವ ಶಕ್ತಿಯೇ ನಿಜವಾದ ಧರ್ಮದ ಧ್ಯೇಯವಾಗಿದೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಮಹಾಮುನಿ ಅಗಸ್ತ್ಯರಿಗೆ ಬೋಧಿಸಿದ ಸಿದ್ಧಾಂತ ಶಿಖಾಮಣಿಯಲ್ಲಿ ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ದಯಾ, ಕ್ಷಮಾ, ದಾನ, ಪೂಜಾ ಜಪ ಮತ್ತು ಧ್ಯಾನ ಎಂಬ ದಶವಿಧ ಸೂತ್ರಗಳನ್ನು ಅಳವಡಿಸಿಕೊಂಡು ಬಾಳಿದರೆ ಮಾನವ ಜೀವನ ಸಾರ್ಥಕಗೊಳ್ಳುವುದೆಂದರು.

ಸಮಾರಂಭ ಉದ್ಘಾಟಿಸಿದ ಎಡೆಯೂರು ಕ್ಷೇತ್ರದ ರೇಣುಕ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಧರ್ಮ ಮನುಷ್ಯನನ್ನು ಒಡೆಯಲು ಹುಟ್ಟಿಲ್ಲ. ಮನುಷ್ಯನನ್ನು ಬೆಸೆಯಲು ಹುಟ್ಟಿದೆ. ಮನೆಯಲ್ಲಿ ಸಂಸ್ಕಾರ ಇರಲಿ. ಮನಸ್ಸಿನಲ್ಲಿ ಭಕ್ತಿ ಇರಲಿ. ನಡೆಯಲ್ಲಿ ನೀತಿ ಇರಲಿ. ಬದುಕಿನಲ್ಲಿ ಸೇವೆ ಇರಲಿ. ಸಮಾಜದಲ್ಲಿ ಪರಸ್ಪರ ಸದ್ಭಾವನೆಗಳನ್ನು ಬೆಳೆಸುವುದೇ ಧರ್ಮವೆಂದು ನುಡಿದರು. ತಾವರೆಕೆರೆ ಶಿಲಾಮಠದ ಡಾ.ಅಭಿನವ ಸಿದ್ಧಲಿಂಗ ಶಿವಾಚಾರ್ಯರು ನಿರೂಪಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಾರಂಭಕ್ಕೂ ಮುನ್ನ ಗ್ರಾಮದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳವರ ಅಡ್ಡಪಲ್ಲಕ್ಕಿ ಮಹೋತ್ಸವ ಸಂಭ್ರಮದಿಂದ ಜರುಗಿತು.



ರಾಷ್ಟ್ರೀಯ ದತ್ತು ಮಾಸಾಚರಣೆ– ಸಹಿ ಸಂಗ್ರಹಣೆಗೆ

ಸಮಾಲೋಚನೆ ಸುದ್ದಿ
SAMALOCHANE RANEBENNURSUDDI
Kannada Daily Morning

ಕಲಿಯುಗದ ಕಲ್ಪತರು ಶ್ರೀ ಚಿದಂಬರೇಶ್ವರರು–ಅರುಣ ಕುಲಕರ್ಣಿ

ಗದಗ: ತಮ್ಮನ್ನು ನಂಬಿದ ಎಲ್ಲ ಭಕ್ತರ ಸಂಕಷ್ಟಗಳನ್ನು ದೂರಗೊಳಿಸಿ, ಅವರ ಜೀವನವು ಸುಗಮವಾಗುವಂತೆ ಮಾಡಿ, ಅವರನ್ನು ಧಾರ್ಮಿಕ ಮಾರ್ಗದಲ್ಲಿ ಕೊಂಡೊಯ್ದ ಮುರಗೋಡದ ಶ್ರೀ ಚಿದಂಬರೇಶ್ವರರು ಕಲಿಯುಗದ ಕಲ್ಪತರು ಎಂದು ನಿವೃತ್ತ ಮುಖ್ಯ ಶಿಕ್ಷಕ ಅರುಣ ಕುಲಕರ್ಣಿ ಹೇಳಿದರು.

ನಗರದ ಶ್ರೀ ಶಂಕರ ಮಠದಲ್ಲಿ ಅದ್ವೈತ ಪ್ರಸಾರ ಪರಿಷತ್ ಟ್ರಸ್ಟ್ ಅದ್ವೈತಾನುಭವ–55ರಲ್ಲಿ ಅವರು ಶ್ರೀ ಚಿದಂಬರ ಚಿಂತನ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಈಗ್ಗೆ 268 ವರ್ಷಗಳ ಹಿಂದೆ ಮುರಗೋಡದ ಶ್ರೀ ಮಾರ್ತಾಂಡ ದೀಕ್ಷಿತರು ಮತ್ತು ಲಕ್ಷ್ಮೀ ದೇವಿಯವರ ಮಗನಾಗಿ ಅವತಾರ ತಾಳಿದ ಶ್ರೀ ಚಿದಂಬರೇಶ್ವರರು ಲೋಕೋದ್ಧಾರಕ್ಕಾಗಿಯೆ ತಮ್ಮ ಅವತಾರವನ್ನು ಮುಡುಪಿರಿಸಿದ್ದರು. ಜನರಿಗೆ ಬಂದ ಕಷ್ಟಗಳನ್ನೆಲ್ಲ ದೂರಮಾಡಿ ಅವರ ಮನದಕ್ಲೇಷಗಳನ್ನೆಲ್ಲಕಳೆದು ಅವರನ್ನುಸನ್ಮಾರ್ಗಕ್ಕೆಹಚ್ಚುವದರೊಂದಿಗೆ ಅವರಲ್ಲಿ ಆಧ್ಯಾತ್ಮದ ಅರಿವಿನ ಜ್ಯೋತಿ ಪ್ರಜ್ವಲಿಸುವಂತೆ ಮಾಡಿದರು. ಕಲಿಯುಗದಲ್ಲಿಯೂ ಭಗವಂತನ ಸಾನಿಧ್ಯ ಸಾಧ್ಯ ಎಂಬ ಮಾತನ್ನು ನಿಜ ಮಾಡಿ ತೋರಿಸಿದವರು ಶ್ರೀ ಚಿದಂಬರೇಶ್ವರರು ಎಂದರು.

ತಮ್ಮ ವಿಶೇಷ ಲೀಲೆಗಳ ಮೂಲಕ ಲೋಕದ ಜನರ ಮನವನ್ನೇ ಗೆದ್ದ ಶ್ರೀ ಚಿದಂಬರೇಶ್ವರರು ಆಧ್ಯಾತ್ಮಿಕ ಸಂಪತ್ತು ಎಲ್ಲ ಸಂಪತ್ತುಗಳಿಗಿಂತ ದೊಡ್ಡದು ಎಂಬುದನ್ನು ತೋರಿಸಿಕೊಟ್ಟರು. ಇದರ ಮುಂದೆ ಲೌಕಿಕದ ಸಂಪತ್ತು ಪರ್ವತದ ಮೇಲಿನ ನೊಣವಿದ್ದಂತೆ ಎಂಬುದನ್ನು ಅನೇಕ ಲೀಲೆಗಳ ಮೂಲಕ ಜಗತ್ತಿಗೆ ಸಾರಿ ಹೇಳಿದರು. ನನ್ನ ಭಕ್ತರೆ ನನಗೆ ದೊಡ್ಡ ಆಸ್ತಿ ಎಂದು ಸಾರಿ ಅದನ್ನು ಹಲವಾರು ಬಾರಿ ಸಿದ್ಧ ಮಾಡಿದ ಶ್ರೀ ಚಿದಂಬರೇಶ್ವರರು ಇಂದಿಗೂ ಭಕ್ತರ ಮನೋಭಿಲಾಷೆಗಳನ್ನು ಕೆಂಗೇರಿಯಲ್ಲಿದ್ದುಕೊಂಡೇ ನೆರವೇರಿಸುತ್ತಿದ್ದಾರೆ. ಕಾಶಿಯ ಶ್ರೀ ವಿಶ್ವನಾಥನೇ ಕರ್ನಾಟಕದಲ್ಲಿ ಶ್ರೀ ಚಿದಂಬರೇಶ್ವರರಾಗಿ ಅವತರಿಸಿ ಮನುಕುಲವನ್ನು ಉದ್ಧರಿಸಿದರು ಎಂದರು.

ಸಾನಿಧ್ಯ ವಹಿಸಿದ್ದ ವೇ. ಮೂ. ರತ್ನಾಕರಭಟ್ಟರು ಆಶೀರ್ವಚನ ನೀಡಿ ಯಾವಾಗೆಲ್ಲ ಭೂಮಿಯ ಮೇಲೆ ಕ್ಷೋಭೆ ಯುಂಟಾಗಿದೆಯೋ ಆಗೆಲ್ಲ ಯಾವುದಾದರೊಂದು ರೂಪದಲ್ಲಿ ಸಾಧು–ಸತ್ಪುರುಷರು ಅವತಾರ ತಾಳಿ ಮನುಷ್ಯ ಕುಲದ ಸಂರಕ್ಷಣೆ ಮಾಡಿದ್ದಾರೆ. ಆದಿ ಜಗದ್ಗುರು ಶ್ರೀ ಶಂಕರಾಚಾರ್ಯರು, ಸದ್ಗುರು ಶ್ರೀ ಬ್ರಹ್ಮಚೈತನ್ಯರು, ಸದ್ಗುರು ಶ್ರೀ ಬ್ರಹ್ಮಾನಂದರು ಮುಂತಾದವರೆಲ್ಲರೂ ನಮ್ಮನ್ನು ಉದ್ಧರಿಸಿದವರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಪ್ರಾಚಾರ್ಯ ಅನಿಲ ವೈದ್ಯ ಮಾತನಾಡಿ ಅದ್ವೈತ ಪ್ರಸಾರ ಪರಿಷತ್ ಇಂದು ಒಂದು ವಿನೂತನ ಕಾರ್ಯವನ್ನು ಸಾಧಿಸಿದೆ. ಶ್ರೀ ಚಿದಂಬರೇಶ್ವರರ ಚಿಂತನ ಮಾಡುವುದರ ಮೂಲಕ ಶ್ರೀ ಚಿದಂಬರೇಶ್ವರರು ಈ ಭೂಮಿಯಲ್ಲಿ ಏನೆಲ್ಲ ಲೀಲೆಗಳನ್ನು ತೆ–ೋರಿದರು ಎಂಬುದು ತಿಳಿಯಿತು. ಶ್ರೀ ಶಂಕರರ ಅದ್ವೈತ ಚಿಂತನೆಯೂ ಅಷ್ಟೇ ಸರಳವಾಗಿದ್ದು, ಅದನ್ನು ಅರ್ಥ ಮಾಡಿಕೊಳ್ಳಲು ಎಲ್ಲರೂ ಪ್ರಯತ್ನಿಸಬೇಕೆಂದರು.

ಸಮಾರಂಭದಲ್ಲಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ. ಸತೀಶ ಹೊಂಬಾಳಿ, ಡಾ. ಸಂಜೀವ ಚಿಂತಾಮಣಿ, ಸುನೀಲ ತೆಂಬದಮನಿಯವರನ್ನು ಸನ್ಮಾನಿಸಲಾಯಿತು. ಸವಿತಾ ತಮ್ಮಣ್ಣವರ ಅರಿಷಿಣ–ಕುಂಕುಮದ ಮಹತ್ವ ತಿಳಿಸಿದರು.

ತನ್ವಿ ಮೋನೆ ಪ್ರಾರ್ಥಿಸಿದರು. ಸಾನ್ವಿ ಇನಾಮದ ಶ್ರೀ ಶಂಕರ ಚಿಂತನೆ ಓದಿದರು. ಗಿರೀಶ ಪಂತರ ಭಕ್ತಿಸೇವೆಯನ್ನು ವಹಿಸಿಕೊಂಡಿದ್ದರು. ಶಿಕ್ಷಕ ಕೌಜಲಗಿ ನಿರೂಪಿಸಿದರು. ದತ್ತಪ್ರಸನ್ನ ಪಾಟೀಲ ಸ್ವಾಗತಿಸಿದರು. ಹೇಮಂತ ಕುಲಕರ್ಣಿ ವಂದಿಸಿದರು. ಕಾರ್ಯಕ್ರಮದಲ್ಲಿ ಬ್ರಹ್ಮ ಸಮಾಜದ ಹಿರಿಯರು–ಸುಮಂಗಲೆಯರು ಪಾಲ್ಗೊಂಡಿದ್ದರು.



ನ.14 ರಿಂದ 20ರವರೆಗೆ 73ನೇ ಸಹಕಾರ ಸಪ್ತಾಹ

ಕೊಪ್ಪಳ: ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕೊಪ್ಪಳ ಜಿಲ್ಲಾ ಸಹಕಾರ ಯೂನಿಯನ್ ನಿ., ಕೊಪ್ಪಳ, ಸಹಕಾರ ಇಲಾಖೆ, ಕೊಪ್ಪಳ ಹಾಗೂ ಜಿಲ್ಲೆಯ ವಿವಿಧ ಸಹಕಾರ ಸಂಘಗಳ ಸಂಯುಕ್ತ ಆಶ್ರಯದಲ್ಲಿ ನವೆಂಬರ್ 14 ರಿಂದ 20 ರವರೆಗೆ 7 ದಿನಗಳ ಕಾಲ ವಿವಿಧ ವಿಷಯಗಳ ಮೇಲೆ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ 73ನೇ ಸಹಕಾರ ಸಪ್ತಾಹ–2026 ವನ್ನು ಹಮ್ಮಿಕೊಳ್ಳಲಾಗಿದೆ.

73ನೇ ಸಹಕಾರ ಸಪ್ತಾಹ–2026ರ ಮುಖ್ಯಧ್ಯೇಯ "ಸಹಕಾರ ಸಂಸ್ಥೆಗಳ ಬೆಳವಣಿಗೆಯಲ್ಲಿ ಉತ್ತಮ ಪರಿಸರ, ತಂತ್ರಜ್ಞಾನ, ಕೌಶಲ್ಯಾಧಾರಿತ, ವೃತ್ತಿಪರ ಸೇವೆ" ಎಂಬುದಾಗಿದೆ.

ನವೆಂಬರ್ 14 ರ ಶನಿವಾರದಂದು ಬೆಳಿಗ್ಗೆ 10.30 ಗಂಟೆಗೆ ಕುಷ್ಟಗಿಯ ಜಿಲ್ಲಾ ಸಹಕಾರ ಯೂನಿಯನ್ ಸಭಾಭವನದಲ್ಲಿ ಸುಸ್ಥಿರ ಅಭಿವೃದ್ಧಿ ಮತ್ತು ಬೆಳವಣಿಗೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಎಂಬ ವಿಷಯದ ಕುರಿತು, ನ.15 ರ ಭಾನುವಾರದಂದು ಮಧ್ಯಾಹ್ನ 3 ಗಂಟೆಗೆ ಕಾರಟಗಿ ತಾಲೂಕಿನ ಯರಡೋಣ ಕಿಂದಕ್ಯಾಂಪ್‌ನ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ಗಣಕೀಕರಣ, ಮಾಹಿತಿ ತಂತ್ರಜ್ಞಾನ ಮತ್ತು ಡಿಜಿಟಲೈಜೇಷನ್ ಪ್ರಕ್ರಿಯೆಗಳು ಸಹಕಾರ ಸಂಸ್ಥೆಗಳ ಬೆಳವಣಿಗೆಗೆ ಪೋಷಕ ಎಂಬ ವಿಷಯದ ಕುರಿತು, ನ.16 ರ ಸೋಮವಾರದಂದು ಬೆಳಿಗ್ಗೆ 11 ಗಂಟೆಗೆ ಗಂಗಾವತಿಯ (ತಾಲೂಕ ಪಂಚಾಯತ್ ಹಿಂಭಾಗ) (ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಗಂಗಾವತಿ) ಸಾಹಿತ್ಯ ಭವನದಲ್ಲಿ ಸಹಕಾರ ಶಿಕ್ಷಣ–ತರಬೇತಿ–ಪ್ರಚಾರ ಮೂಲಕ ಸಹಕಾರ ಸಂಸ್ಥೆಗಳಲ್ಲಿ ಪರಿಣಾಮಕಾರಿ ಬದಲಾವಣೆ ಎಂಬ ವಿಷಯದ ಕುರಿತು, ನ.17 ರ ಮಂಗಳವಾರದಂದು ಬೆಳಿಗ್ಗೆ 11 ಗಂಟೆಗೆ ಕುಷ್ಟಗಿಯ ಶ್ರೀ ಕನ್ನಿಕಾಪರಮೇಶ್ವರಿ ದೇವಸ್ಥಾನದ ಮಿನಿ ಫಂಕ್ಷನ್ ಹಾಲ್‌ನಲ್ಲಿ (ಶ್ರೀ ಸಪ್ತಗಿರಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಕುಷ್ಟಗಿ) ಸಹಕಾರ ಸಂಸ್ಥೆಗಳ ಮೂಲಕ ಮೌಲ್ಯವರ್ಧನೆ ಬ್ರಾಂಡ್ ನಿರ್ಮಾಣ ಎಂಬ ವಿಷಯದ ಕುರಿತು, ನ.18 ರ ಬುಧವಾರದಂದು ಬೆಳಿಗ್ಗೆ 11 ಗಂಟೆಗೆ ಕೊಪ್ಪಳ ತಾಲೂಕಿನ ಘಟ್ಟರಡ್ಡಿಹಾಳದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ಸಾರ್ವಜನಿಕ/ಖಾಸಗಿ – ಸಹಕಾರಿ ಪಾಲುದಾರಿಕೆ ಬಲಪಡಿಸುವ ದಿನ ಎಂಬ ವಿಷಯದ ಕುರಿತು, ನ.19 ರ ಗುರುವಾರದಂದು ಬೆಳಿಗ್ಗೆ 10 ಗಂ–ಟೆಗೆ ಯಲಬುರ್ಗಾ ತಾಲೂಕಿನ ಬಂಡಿಯ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿ., ದ ಸಭಾಂಗಣದಲ್ಲಿ ಮಹಿಳೆಯರು, ಯುವಜನರು ಮತ್ತು ಸಮಾಜದ ಅಬಲ ವರ್ಗಗಳು ಸಹಕಾರ ಕ್ಷೇತ್ರದಲ್ಲಿ ಪಾಲ್ಗೊಳ್ಳುವಿಕೆ ಎಂಬ ವಿಷಯದ ಕುರಿತು, ನ.20 ರ ಶುಕ್ರವಾರದಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಗಾಣಿಗರ ಸಮುದಾಯ ಭವನದಲ್ಲಿ (ಜಯದೇವ್ ಹಿಂದುಳಿದ ವರ್ಗಗಳ ಪತ್ತಿನ ಸಹಕಾರ ಸಂಘ ನಿ., ಕೊಪ್ಪಳ ಅಮೃತ ಗ್ರಾಹಕರ ಸಹಕಾರ ಸಂಘ ನಿ., ಕೊಪ್ಪಳ, ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ಹಿಂದುಳಿದ ವರ್ಗದ ಸಹಕಾರ ಸಂಘ ನಿ., ಕೊಪ್ಪಳ, ಅಭಿನವ ಪತ್ತಿನ ಸಹಕಾರ ಸಂಘ ನಿ., ಕೊಪ್ಪಳ) ಪರಿಸರ ಸಂರಕ್ಷಣೆ, ಲಿಂಗ ಸಮಾನತೆ ಮತ್ತು ವಿಶ್ವ ಶಾಂತಿಗಾಗಿ ಸಹಕಾರ ಸಂಸ್ಥೆಗಳು ಎಂಬ ವಿಷಯದ ಕುರಿತು ಸಪ್ತಾಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಮೇಲ್ಕಂಡ ದಿನಗಳಲ್ಲಿ ಕಡ್ಡಾಯವಾಗಿ ಸಹಕಾರ ಸಂಘಗಳ ಕಟ್ಟಡದ ಮೇಲೆ ಸಪ್ತವರ್ಣದ ಸಹಕಾರ ಬಾವುಟವನ್ನು ಹಾರಿಸುವುದರೊಂದಿಗೆ ಸಹಕಾರ ಕ್ಷೇತ್ರದ ಅಸ್ತಿತ್ವವನ್ನು ಸಾರ್ವಜನಿಕರಿಗೆ ತೋರಿಸಿಕೊಡಬೇಕು. ಅಂದಿನ ದಿನಗಳಲ್ಲಿ ಹಿರಿಯ ಸಹಕಾರಿಗಳಿಗೆ ಅವರ ಸೇವೆಯನ್ನು ಗುರುತಿಸಿ ಗೌರವಿಸುವ ಕಾರ್ಯಕ್ರಮ, ಹೊಸ ಯೋಜನೆಗಳ ಅನುಷ್ಠಾನ ಮುಂತಾದ ನೈಜ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ಜನಸಾಮಾನ್ಯರಿಗೆ ಹಾಗೂ ಸಹಕಾರಿಗಳಿಗೆಉಪಯುಕ್ತವಾಗುವಂತಹಉಚಿತಆರೋಗ್ಯತಪಾಸಣೆ ಶಿಬಿರ, ಲಸಿಕೆ ಕಾರ್ಯಕ್ರಮ, ರಕ್ತದಾನ ಶಿಬಿರ, ಸಹಕಾರ ಸಂಘಗಳು ಎದುರಿಸುತ್ತಿರುವ ಸವಾಲುಗಳು, ಸವಾಲುಗಳನ್ನು ಎದುರಿಸಲು ಅಗತ್ಯವಾದ ಮಾರ್ಗೋಪಾಯಗಳು, ಸಂವಾದ ಕಾರ್ಯಕ್ರಮಗಳು, ವಿಡಿಯೋ ಕಾನ್ಫರೆನ್ಸ್, ವೆಬಿನಾರ್ ಮುಂತಾದ ಸಾಮಾಜಿಕ ಕಳಕಳಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದಾಗಿದೆ. ಕಾರಣ ಜಿಲ್ಲೆಯ ಎಲ್ಲಾ ಸಹಕಾರ ಸಂಘಗಳ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿಗಳು ಕಾರ್ಯಕ್ರಮ ಜರುಗುವ ಸ್ಥಳದಲ್ಲಿ ಹಾಜರಾಗಿ ಸಹಕಾರ ಚಳುವಳಿಯನ್ನು ಬಲಪಡಿಸಬೇಕು ಎಂದುಕೊಪ್ಪಳಸಹಕಾರಸಂಘಗಳಉಪನಿಬಂಧಕರುಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುಲೇಮಾನ್ ನಾಶಿಪುಡಿ, ಉಸ್ಮಾನ್ ಬಬರ್ಚಿ ನಿರ್ದೇಶಕರಾಗಿ ಆಯ್ಕೆ

ನವಲಗುಂದ: ನವಲಗುಂದ ಪಟ್ಟಣದ ಯುವ ಕಾಂಗ್ರೆಸ್ ಉಪಾಧ್ಯಕ್ಷರಾದ ಸುಲೇಮಾನ ನಾಶಿಪುಡಿ ಅವರಿಗೆ ರಾಜ್ಯ ಕಾಂಗ್ರೆಸ್ ಸರ್ಕಾರ ಮಹತ್ವದ ಜವಾಬ್ದಾರಿ ವಹಿಸಿದ್ದು ಮೈಸೂರು ಇಲೆಕ್ಟಿಕಲ್ ಇಂಡಸ್ಟ್ರೀಸ್ ಲಿಮಿಟೆಡನ ನಿರ್ದೇಶಕರನಾಗಿ ನೇಮಕ ಮಾಡಿದ್ದು ಇನ್ನು ಕಾಂಗ್ರೆಸ್ಸಿನ ಕಟ್ಟಾಳು ಹಿರಿಯರಾದ ಉಸ್ಮಾನ್ ಬಬರ್ಚಿ ಅವರಿಗೆ ಹುಬ್ಬಳ್ಳಿ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ನಿರ್ದೇಶಕರನ್ನಾಗಿ ಆಯ್ಕೆ ಮಾಡಲಾಗಿದೆ ಆಯ್ಕೆಯಾದ ಯುವ ಪ್ರತಿಭೆ ಹಾಗೂ ಹಿರಿಯರಿಗೆ ಕಾಂಗ್ರೆಸ್ ಪಕ್ಷ ಗುರುತಿಸಿ ಅತ್ಯುತ್ತಮ ಜವಾಬ್ದಾರಿ ನೀಡಿದ್ದಕ್ಕೆ ಅವರ ಅಭಿಮಾನಿಗಳು ಹಾಗೂ ಪಕ್ಷದ ಹಿರಿಯರು ಸರಕಾರಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ.



ಕೊಪ್ಪಳದಲ್ಲಿ ಸಂಭ್ರಮದ ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವ ಆಚರಣೆ: ಸಮುದಾಯ ಭವನ ಉದ್ಘಾಟನೆ

ಕೊಪ್ಪಳ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಹಾಗೂ ಕೊಪ್ಪಳ ನಗರಸಭೆಯ ಸಂಯುಕ್ತಾಶ್ರಯದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ–2026ರ ಅಂಗವಾಗಿ ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವ ಹಾಗೂ ಸಮುದಾಯ ಭವನ ಉದ್ಘಾಟನಾ ಕಾರ್ಯಕ್ರಮ (ನ.13) ಶುಕ್ರವಾರ ನಗರದಲ್ಲಿ ಸಂಭ್ರಮದಿಂದ ಜರುಗಿತು.

ವಾಲ್ಮೀಕಿ ಗುರುಪೀಠ ರಾಜನಹಳ್ಳಿ–ಹರಿಹರದ ಪರಮಪೂಜ್ಯ ಶ್ರೀ ಪ್ರಸನ್ನಾನಂದಪುರಿ ಮಹಾಸ್ವಾಮಿಗಳು ವಾಲ್ಮೀಕಿ ಸಮುದಾಯ ಭವನ ಉದ್ಘಾಟಿಸಿ, ಶ್ರೀ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರ ಅಳವಡಿಸಿದ ಮೆರವಣಿಗೆಗೆ ಚಾಲನೆ ನೀಡಿದರು.

ಜಯಂತ್ಯುತ್ಸವದ ಅಂಗವಾಗಿ ವಾಲ್ಮೀಕಿ ಭವನದಿಂದ ನಗರದ ತಾಲೂಕು ಕ್ರೀಡಾಂಗಣದವರೆಗೆ ನಡೆದ ಮೆರವಣಿಗೆಯಲ್ಲಿ ಮಹಿಳೆಯರು ಕುಂಭ ಹೊತ್ತು ಪಾಲ್ಗೊಂಡರು. ವಿವಿಧ ಕಲಾತಂಡಗಳು, ಕಲಾವಿದರು ಮೆರವಣಿಗೆಗೆ ಮೆರುಗು ನೀಡಿದರು. ಈ ಸಂದರ್ಭದಲ್ಲಿ ಕೊಪ್ಪಳದ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ, ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರಸನ್ನಾ ಗಡಾದ, ಮಾಜಿ ಸಂಸದರಾದ ಕರಡಿ ಸಂಗಣ್ಣ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಂಜುನಾಥ ಗುಂಡೂರ, ನಗರಸಭೆಯ ಮಾಜಿ ನಾಮನಿರ್ದೇಶಿತ ಸದಸ್ಯರಾದ ಚನ್ನಪ್ಪ ಹಂಚಿನಾಳ, ರಾಮಣ್ಣ ಬೆಳವಿನಾಳ, ವಾಲ್ಮೀಕಿ ಸಮುದಾಯದ ಮುಖಂಡರಾದ ಪರಶುರಾಮ ನಾಯಕ್, ಸೇರಿದಂತೆ ಸಮಾಜ ಪ್ರಮುಖ ಮುಖಂಡರು ಮತ್ತು ಮಹಿಳೆಯರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.



ವಾರ್ಡ್ ನಂ 22ರಲ್ಲಿ 3 ಕೋಟಿ 4 ಲಕ್ಷ ಆರ್ ಸಿಸಿ ಚರಂಡಿ ನಿರ್ಮಾಣ ಕಾಮಗಾರಿಗೆ ಮಿಥುನ್ ಜಿ. ಪಾಟೀಲ್ ಚಾಲನೆ

ಗಜೇಂದ್ರಗಡ: ಪುರಸಭೆ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ 22 ರಲ್ಲಿ ಬರುವ ಮುರ್ತುಜಾಸಾಬ್‌ನಿಡ್ಸುರ್‌ಇವರಮನೆಯಿಂದ ಭೋಸ್ಲೆ ಅವರ ಎರಡು ರಸ್ತೆ ಬದಿ ಆರ್ ಸಿ ಸಿ ಚರಂಡಿ ನಿರ್ಮಾಣ ರಂಗಣ್ಣವರ ಮಾಷ್ಟರ ಮನೆಯಿಂದ ಹಳ್ಳದವರಿಗೆ ರಸ್ತೆ ಎರಡು ಬದಿ ಆರ್, ಸಿ ಸಿ ಚರಂಡಿ ನಿರ್ಮಾಣ ಹಾಗೂ ಜಿ ಎಸ್ ಪಾಟೀಲ್ ನಗರದ ಸೌಚಾಲಯದಿಂದ ಉಣಚಗೇರಿ ಹಳ್ಳದವರಿಗೆ (ರಾಜ ಕಾಲುವೆ)ಮತ್ತು ವಾರ್ಡ್ ನಂ 17ರಲ್ಲಿ ಪುರಸಭೆ ಸೌಚಾಲಯದಿಂದ ಕುಷ್ಟಗಿ ರಸ್ತೆವರಿಗೂ ಸಿ ಸಿ ಕಾಮಗಾರಿ ಮತ್ತು ಕಾಲೇಶ್ ಮ್ಯಾಗೇರಿ ಮನೆಯಿಂದ ಸರಕಾರಿ ದವಾಖಾನೆ ಮುಂದೆ ಸಿ ಸಿರಸ್ತೆನಿರ್ಮಾಣಹಾಗೂವಾರ್ಡ್‌ನಂ10ರಲ್ಲಿ ಸೇವಾಲಾಲ್ ದೇವಸ್ಥಾನದಿಂದ ಅಂಬೇಡ್ಕರ್ ವೃತ್ತದ ವರಿಗೂ ಸುಮಾರು 3 ಕೋಟಿ 4 ಲಕ್ಷ ಭೂಮಿ ಪೂಜೆ ಕಾರ್ಯಕ್ರಮ ನೆರವೇರಿತು. ಕಾರ್ಯಕ್ರಮ ನಿನ್ನೆ ಭೂಮಿ ಪೂಜೆ ಮಾಡುವ ಮೂಲಕ ಮಿಥುನ್ ಜಿ ಪಾಟೀಲ್ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರಕಾರದಲ್ಲಿ ಹಣ ಇಲ್ಲ ಅಂತ ಅಪಪ್ರಚಾರ ಮಾಡುವ ವ್ಯಕ್ತಿಗಳಿಗೆ,



ಈ ಕಾಮಗಾರಿ 3ಕೋಟಿ 4ಲಕ್ಷ ವೆಚ್ಚದಲ್ಲಿ ಈ ಕಾಮಗಾರಿ ಉತ್ತರ ಕೊಟ್ಟಿದೆ ಎಂದು ತಿಳಿಸಿದರು. ಈ ಅಡಿಗಲ್ಲು ಕಾರ್ಯಕ್ರಮದಲ್ಲಿ, ಸಿದ್ದಪ್ಪ ಬಂಡಿ, ಹೆಚ್, ಎಸ್, ಸೋಂಪುರ, ಬಸವರಾಜ್ ಶೀಲವಂತರ, ವೇಂಕಟೇಶ್ ಮುದ್ಗಲ್, ರಾಜು ಸಾಂಗ್ಲಿಕರ್, ಶಿವರಾಜ್ ಘೋರ್ಪಡೆ, ಸುಮಂಗಲ ಇಟಗಿ,ಪ್ರಶಾಂತ ರಾಠೋಡ್,ರೂಪಲೇಶ್ ರಾಠೋಡ್, ಈಶಪ್ಪ ರಾಠೋಡ್,ಮುರ್ತುಜಾ ಡಾಲಾಯತ್, ಬಾಬುಗೌಡ ಎಂ, ಪಾಟೀಲ್,ತಾರಾಸಿಂಗ್ ರಾಠೋಡ್,ಗೊಂಗದಶೆಟ್ಟಿಮಠ್, ಹಣಮಂತ ಕುರಿ ಇನ್ನೂ ಹಲವಾರು ಮುಖಂಡರು ಪುರಸಭೆ ಅಧಿಕಾರಿಗಳು ಮತ್ತು ಗಜೇಂದ್ರಗಡ ನಾಗರಿಕರು ಇದ್ದರು.

ಗ್ರಾಮೀಣ ಯುವಕ ಯುವತಿಯರು ಕ್ರೀಡಾಸಕ್ತಿ ಬೆಳೆಸಿಕೊಳ್ಳಲಿ: ದಾಡಿಬಾವಿ

ನವಲಗುಂದ: ತಾಲೂಕಿನ ತಿರ್ಲಾಪುರ ಗ್ರಾಮದ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಸುಧಾ.ಬಿ. ಬೊಮ್ಮನವರ ರವರು ನೇಪಾಳ ದೇಶದಲ್ಲಿ ನಡೆಯಲಿರುವ ಅಂತರಾಷ್ಟ್ರೀಯ ಮಟ್ಟದ ಇಂಡೋ ನೇಪಾಳ ಥ್ರೂ ಬಾಲ್ ಕ್ಲಬ್ ಚಾಂಪಿಯನಶಿಪ್ 2026ರ ಸ್ಪರ್ಧೆಗೆ ಆಯ್ಕೆಯಾಗಿದಕ್ಕೆ ಅವರನ್ನು ಜಿಲ್ಲಾ ಬಿಜೆಪಿ (ಗ್ರಾ) ಕಾರ್ಯದರ್ಶಿ ದೇವರಾಜ ಬ. ದಾಡಿಬಾವಿ ತಮ್ಮ ಕಚೇರಿಯಲ್ಲಿ ಸನ್ಮಾನಿಸಿ ಗೌರವಿಸಿದರು.

ನಂತರ ಮಾತನಾಡಿದ ಅವರು ಗ್ರಾಮೀಣ ಪ್ರದೇಶದ ಯುವಕ ಯುವತಿಯರು ಕ್ರೀಡಾ ಆಸಕ್ತಿ ಬೆಳೆಸಿಕೊಳ್ಳಲು ಕರೆ ನೀಡಿದರು ಕೇಂದ್ರ ಸರ್ಕಾರ ಖಿಲೋ ಇಂಡಿಂ–ಯಾ ಯೋಜನೆ ಅಡಿಯಲ್ಲಿ ಗ್ರಾಮೀಣ ಪ್ರದೇಶದ ಯುವಕ ಯುವತಿಯರಿಗೆ ವಿದ್ಯಾರ್ಥಿಗಳಿಗೆ ಇದರ ಸದುಪಯೋಗ ಪಡೆದುಕೊಳ್ಳಬೇಕೆಂದರು.

ಈ ವೇಳೆ ಹುಬ್ಬಳ್ಳಿ ಮಂಡಲ ಬಿಜೆಪಿ ಅಧ್ಯಕ್ಷ ಮಂಜುನಾಥ ಗಣಿ, ವಿರುಪಾಕ್ಷಪ್ಪ ಬಾವಿಕಟ್ಟಿ, ಶಂಕ್ರಪ್ಪ ಗಾಣಿಗೇರ, ಅರುಣ ಹುಲ್ಲೂರ, ಶಿವು ಬೊಮನ್ನವರ, ಚಿದಾನಂದ ಆಯಟ್ಟಿ, ಶಿವರಾಜ್ ಹದರಿ ಮುಂತಾದವರು ಉಪಸ್ಥಿತರಿದ್ದರು.



ಗಂಗೆ ಬಸವೇಶ್ವರ ದೇವಸ್ಥಾನ ನಿರ್ಮಾಣಕ